ಸಂಪುಟ 01 | ಸಂಚಿಕೆ 179 | ಶನಿವಾರ 23 ಮೇ 2026 | ಪುಟ 4 | ಬೆಲೆ-2 ರೂ.

ಇರ್ಫಾನ್ ಕೆ
ಸಂಪಾದಕರು

M A ವಹಾಬ್
ಪ್ರಧಾನ ಸಂಪಾದಕರು

# ನೈಜ್ಯ ದೆಸೆ
NAIJYA DESE

ಸತ್ಯದ ದಿಕ್ಕು TRUE PATH

ಕನ್ನಡ ದಿನ ಪತ್ರಿಕೆ

ಸಿಂಧನೂರು, ಮಸ್ಕಿ
ಮಾನ್ವಿ, ಲಿಂಗಸೂರು,
ರಾಯಚೂರ,ದೇವದುರ್ಗ
ಬಳ್ಳಾರಿ, ಕೊಪ್ಪಳ
ಯಾದಗಿರಿ, ಕಲಬುರ್ಗಿ,
ಬೀದರ, ವಿಜಯಪುರ.
ಗದಗ, ವಿಜಯನಗರ.
ಏಕಕಾಲಕ್ಕೆ ಪ್ರಕಟಣೆ

REGIONAL KANNADA DAILY MORNING

RNI code: KNKAN/25/A3581 ಮೋ: 9902277588, 9880707587, 9008787586 naijyadese@gmail.com

## ಈ ದಿನದ ವಿಶೇಷ

**1) ವಿಶ್ವ ಕುಸ್ತಿ ದಿನ**

ಪ್ರತಿ ವರ್ಷ ಮೇ 23 ರಂದು ವಿಶ್ವ ಕುಸ್ತಿ ದಿನವನ್ನು (ಘಾಂಡಿಟಜ ಘಾಡಿಇಣಟುಟಿಂ ಆಚಿಥಿ) ಆಚರಿಸಲಾಗುತ್ತದೆ. ಈ ದಿನವು ಕುಸ್ತಿ ಕ್ರೀಡೆಯ ಇತಿಹಾಸವನ್ನು ಸ್ಮರಿಸಲು ಮತ್ತು ಜಾಗತಿಕವಾಗಿ ಈ ಕ್ರೀಡೆಯನ್ನು ಉತ್ತೇಜಿಸಲು ಮೀಸಲಾಗಿರುವ ಮಹತ್ವದ ದಿನವಾಗಿದೆ.

**2) ವಿಶ್ವ ಆಮೆ ದಿನ**

ಪ್ರತಿ ವರ್ಷ ಮೇ 23 ರಂದು ವಿಶ್ವ ಆಮೆ ದಿನ (World Turtle Day) ವನ್ನು ಆಚರಿಸಲಾಗುತ್ತದೆ. ಆಮೆಗಳು ಮತ್ತು ಅವುಗಳ ಆವಾಸಸ್ಥಾನಗಳನ್ನು ರಕ್ಷಿಸುವ ಮಹತ್ವದ ಬಗ್ಗೆ ಜಾಗತಿಕವಾಗಿ ಜಾಗೃತಿ ಮೂಡಿಸಲು, 2000ನೇ ಇಸವಿಯಲ್ಲಿ 'ಅಮೇರಿಕನ್ ಆಮೆ ಪಾರುಗಾಣಿಕಾ' (American Tortoise Rescue) ಸಂಸ್ಥೆಯು ಈ ದಿನವನ್ನು ಸ್ಥಾಪಿಸಿತು.

## ಸುಭಾಷಿತ


ಜಗತ್ತಿನಲ್ಲಿ ಯಾರು ಏನನ್ನೂ
ಕಳೆದುಕೊಂಡಿಲ್ಲವೋ ಅವರು
ಏನನ್ನೂ ಪಡೆದಿಲ್ಲ.

ರವೀಂದ್ರನಾಥ ಟ್ಯಾಗೋರ್

## ಪರ್ಯಾಯ ಇಂಧನ ಅನ್ವೇಷಣೆಗೆ ಮೋದಿ ಕರೆ

ನವದೆಹಲಿ: ಮಧ್ಯಪ್ರಾಚ್ಯ ಯುದ್ಧದಿಂದ ಉಂಟಾದ ಇಂಧನ ಬಿಕ್ಕಟ್ಟು ನಿವಾರಣೆಗೆ ಪರ್ಯಾಯ ಇಂಧನ ಮೂಲಗಳನ್ನು ತುರ್ತಾಗಿ ಅನ್ವೇಷಿಸುವಂತೆ ಪ್ರಧಾನಿ ಮೋದಿ ಕರೆ ನೀಡಿದ್ದಾರೆ. ನಿನ್ನೆ ನಡೆದ ಮಹತ್ವದ ಸಚಿವ ಸಂಪುಟದ ಸಭೆಯಲ್ಲಿ ಅವರು ಈ ಕರೆ ನೀಡಿದ್ದಾರೆ ಎಂದು ಉನ್ನತ ಮೂಲಗಳು ತಿಳಿಸಿವೆ.

ಇರಾನ್ ಮೇಲಿನ ಅಮೆ–ರಿಕ–ಇಸ್ರೇಲ್ ಯುದ್ಧ ಮತ್ತು ಹಾರ್ಮುಜ್ ಜಲಸಂಧಿಯ ನಿರಂತರ ದಿಗ್ಬಂಧನವು ಗಲ್ಫನಿಂದ ಭಾರತದ ಇಂಧನ ಸರಬರಾಜನ್ನು ಅಡ್ಡಿಪಡಿಸಿದೆ. ಈ ಸಂದರ್ಭದಲ್ಲಿ ಸಾಂಪ್ರದಾಯಿಕ ಇಂಧನ ಪರ್ಯಾಯಗಳನ್ನು ಮೀರಿ ಇಂಧನ ಪರ್ಯಾಯಗಳನ್ನು ನೋಡುವಂತೆ ಪ್ರಧಾನಿ ಕರೆ ನೀಡಿದ್ದಾರೆ. ಎಲ್‌ಪಿಜಿ ಅಡುಗೆ ಅನಿಲಕ್ಕೆ ಬದಲಿಯಾಗಿ ಜೈವಿಕ ಅನಿಲಕ್ಕೂ ಪ್ರಧಾನಿ ಒತ್ತಾಯಿಸಿದ್ದಾರೆ.ಪ್ರಧಾನಿ ತಮ್ಮ ಮಂತ್ರಿಗಳಿಗೆ ಸುಧಾರಣೆಗಳನ್ನು ಹುರುಪಿನಿಂದ ಜಾರಿಗೆ ತರಲು ಕರೆ ನೀಡಿದರು, ವಿಕಸಿತ್ ಭಾರತ್



2047 ಕೇವಲ ಭರವಸೆಯಲ್ಲ ಆದ–'ರೆ ಬದ್ಧತೆಯಾಗಿದೆ ಎಂದು ಒತ್ತಿ ಹೇಳಿದರು.

ಪ್ರಧಾನಿ ತಮ್ಮ ಐದು ರಾಷ್ಟ್ರಗಳ ಪ್ರವಾಸದಿಂದ ಹಿಂದಿರುಗುತ್ತಿದ್ದಂತೆ ಸಚಿವ ಸಂಪುಟದ ಸಭೆ ನಡೆಯಿತು, ಅದರ ಮೊದಲ ನಿಲ್ದಾಣ ಯುನೈಟೆಡ್ ಅರಬ್ ಎಮಿರೇಟ್‌ಸ (ಯುಎಇ). ಭಾರತ ಮತ್ತು ಯುಎಇ ಪೆಟ್ರೋಲಿಯಂ ಮೀಸಲು ಕುರಿತು ಪ್ರಮುಖ ಒಪ್ಪಂದಕ್ಕೆ ಸಹಿ ಹಾಕಿದವು, ಅಲ್ಲಿ ಯು–ಎಇಯ ಅಬುಧಾಬಿ ರಾಷ್ಟ್ರೀಯ ತೈಲ ಕಂಪನಿ ಭಾರತದ ಪೆಟ್ರೋಲಿಯಂ ನಿಕ್ಷೇಪಗಳನ್ನು ಹೆಚ್ಚಿಸುತ್ತದೆ. ಇದಲ್ಲದೆ, ಎಲ್‌ಪಿಜಿ ಪೂರೈಕೆಯ ಬಗ್ಗೆಯೂ ಒಪ್ಪಂದ ಮಾಡಿಕೊಳ್ಳಲಾಯಿತು.

ತೈಲ ಮಾರುಕಟ್ಟೆ ಕಂಪನಿಗಳ ನಷ್ಟವನ್ನು ಸರಿದೂಗಿಸಲು ಪೆಟ್ರೋಲ್ ಮತ್ತು ಡೀಸೆಲ್ ಬೆಲೆಗಳನ್ನು ಲೀಟ–ರ್‌ಗೆ ಸುಮಾರು 3 ರೂ.ಗಳಷ್ಟು ಹೆಚ್ಚಿಸುವುದರೊಂದಿಗೆ ಮಧ್ಯಪ್ರಾಚ್ಯ ಬಿಕ್ಕಟ್ಟು ಅಂತಿಮವಾಗಿ ಭಾರತೀಯ ಗ್ರಾಹಕರನ್ನು ನೇರವಾಗಿ ಬಾಧಿಸಿದೆ.ಇಂಧನ ಬಳಕೆಯನ್ನು ಕಡಿತಗೊಳಿಸುವ ಬಗ್ಗೆ ಪ್ರಧಾನಿ ಮೋದಿ ಒತ್ತು ನೀಡುತ್ತಿದ್ದಾರೆ, ನಾಗರಿಕರು ಸಾಧ್ಯವಾದಷ್ಟು ವಿದ್ಯುತ್ ವಾಹನ ಮತ್ತು ಸಾರ್ವಜನಿಕ ಸಾರಿಗೆಗೆ ಬದಲಾಗುವಂತೆ ಮನವಿ ಮಾಡುತ್ತಿದ್ದಾರೆ. ಸರ್ಕಾರದ ಕಾರ್ಯನಿರ್ವಹಣೆಯಲ್ಲಿ ಸರಳತೆಯನ್ನು ತರುವ ಮತ್ತು ಸಚಿವಾಲಯಗಳಲ್ಲಿ ಸಾರ್ವಜನಿಕ ಹಿತಾಸಕ್ತಿ ಪ್ರಮುಖ ಆದ್ಯತೆಯಾಗಿ ಉಳಿಯುವಂತೆ ನೋಡಿಕೊಳ್ಳುವ ಅಗತ್ಯವನ್ನು ಪ್ರಧಾನಿ ಒತ್ತಿ ಹೇಳಿದರು.ಸರ್ಕಾರದ 12 ವರ್ಷಗಳ ಪ್ರಯಾಣ, ಕಲ್ಯಾಣ ಉಪಕ್ರಮಗಳು ಮತ್ತು ಸುಧಾರಣಾ ಕಾರ್ಯಸೂಚಿಯನ್ನು ನೇರವಾಗಿ ಜನರಿಗೆ ತಲುಪಿಸುವಂತೆ ಪ್ರಧಾನಿ ಮೋದಿ ಸಚಿವರನ್ನು ಕೇಳಿದರು ಎಂದು ಮೂಲಗಳು ತಿಳಿಸಿವೆ.

## ಸೌಹಾರ್ದದಿಂದ ಬಕ್ರೀದ್ ಆಚರಿಸಿ



**ನೈಜ್ಯ ದೆಸೆ ನ್ಯೂಸ್**

**ಬಳ್ಳಾರಿ / ಕಂಪ್ಲಿ: ಮೇ 28ರಂದು ನಡೆಯಲಿರುವ ಬಕ್ರೀದ್ ಹಬ್ಬವನ್ನು ಶಾಂತಿ ಸೌಹಾರ್ದದಿಂದ ಆಚರಿಸಬೇಕು. ಪ್ರಾಥ–ರ್ನೆಯನ್ನು ನಿಗದಿಗೊಳಿಸಿರುವ ಸ್ಥಳಗಳಲ್ಲಿ ಪ್ರಾರ್ಥನೆ ಸಲ್ಲಿಸಿ ಶಾಂತಿ ಸೌಹಾರ್ದತೆಯಿಂದ ಆಚರಿಸಿ, ಕಾನೂನು ಸುವ್ಯವಸ್ಥೆ ಕಾಪಾಡಲು ಪೊಲೀಸ್ ಇಲಾಖೆ ಸದಾ ಸಿದ್ಧವಿದೆ, ಯಾವುದೇ ಅಹಿತಕರ ಘಟನೆ ನಡೆದಂತೆ ಹಿಂದು–ಮುಸ್ಲಿಮರು ಒಗ್ಗಟ್ಟಾಗಿ ಬಕ್ರೀದ್ ಆಚರಿಸಬೇಕು.**

ಶಾಂತಿಗೆ ಭಂಗ ತರುವವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗುವುದು ಎಂದು ಡಿವೈಎಸ್ಪಿ ಪ್ರಸಾದ್ ಕೆ ಗೋಖಲೆ ರವರು ಪಟ್ಟಣದ ಪೊಲೀಸ್ ಠಾಣೆಯಲ್ಲಿ ಬಕ್ರೀದ್ ಹಬ್ಬದ ಅಂಗವಾಗಿ ಗುರುವಾರ ನಡೆದ ಶಾಂತಿ ಸಭೆಯಲ್ಲಿ ತಿಳಿಸಿದರು. ಪಿಐ ಕೆ. ಬಿ. ವಾಸು ಕುಮಾರ್ ಮಾತನಾಡಿ ಕಂಪ್ಲಿ ಪಟ್ಟಣ ಶಾಂತಿ ಸೌಹಾರ್ದತೆಗೆ ಹೆಸರಾಗಿದೆ, ಯಾವುದೇ ಅಹಿತಕರ ಘಟನೆ ಆಗದಂತೆ ಸಂಭ್ರಮದಿಂದ ಹಬ್ಬವನ್ನು ಆಚರಿಸಿ ಕಾನೂನನ್ನು ಗೌರವಿಸಿ, ಸಹಕರಿಸಿ ಎಂದು ತಿಳಿಸಿದರು.


ಪ್ರಮುಖರಾದ ಕೆ. ಎಂ. ಹೇಮಯ್ಯಸ್ವಾಮಿ, ಎನ್. ಹಬೀಬಿ ರೆಹಮಾನ್ ಕೆ. ಮೆಹಬೂಬ್ ತಮ್ಮ ಅಭಿಪ್ರಾಯಗಳನ್ನು ತಿಳಿಸಿದರು.

ಈ ಸಂದರ್ಭದಲ್ಲಿ ಎಎಸ್‌ಐ ಬಸವರಾಜ್, ಪೊಲೀಸ್ ಅಧಿಕಾರಿಗಳು ಸೇರಿದಂತೆ ವಿವಿಧ ಸಂಘ ಸಂಸ್ಥೆಗಳ ಮುಖಂಡರಾದ ಎಂ. ಉಸ್ಮಾನ್, ಎಂ. ಬಾಬು, ಅಸ್ಲಾಂ, ಮೌಲಾಹುಸೇನ್, ನವಾಬಸಾಬ್ , ಬಿ. ಜಾಫರ್ ಸಾಧಿಕ್, ಕಡಪ ಮಸ್ತನವಲಿ, ಅತ್ತಾವುಲ್ಲಾ, ಜಹೀರುದ್ದಿನ, ವಾಹಿದ್, ಸಿದ್ದನಗೌಡ, ದೇವಣ್ಣ, ಕನಕಪ್ಪ ಹನುಮಂತಪ್ಪ, ದೊಡ್ಡಬಸಪ್ಪ, ರಮೇಶ, ನಾಗಪ್ಪ ಸೇರಿದಂತೆ ಇತರರಿದ್ದರು.

## ಹಿರಿಯ ಪತ್ರಕರ್ತ ಹಾಜಿ ಅಬ್ದುಲ್ ನಬಿ ಪಾರ್ಥಿವ ಶರೀರಕ್ಕೆ ಬಿ ಎಂ ಸತೀಶ್ ಮಾಲಾರ್ಪಣೆ ನಮನ

**ನೈಜ್ಯ ದೆಸೆ ನ್ಯೂಸ್**

**ಸಿರುಗುಪ್ಪ: ನಗರದ 5ನೇ ವಾರ್ಡ್ ಸೌದಾಗರ್ ಮೊಹಲ್ಲಾ ಇಬ್ರಾಹಿಂ ಮಂಜಿಲ್ ನಲ್ಲಿ ಹಿರಿಯ ಪತ್ರಕರ್ತ ಹಾಗೂ ಸಮಾಜ ಸೇವಕರು ಹಾಜಿ ಅಬ್ದುಲ್ ನಬಿ ಅವರ ಪಾರ್ಥಿವ ಶರೀರಕ್ಕೆ ಗುರುವಾರ ಸಿರುಗುಪ್ಪ ವಿಧಾನಸಭೆಯ ಶಾಸಕರಾದ ಬಿ ಎಂ ನಾಗರಾಜ ಅವರ ಹಿರಿಯ ಸಹೋದರ ಬಿ ಎಂ ಸತೀಶ್ ಅವರು ಮಾಲಾರ್ಪಣೆ ಮಾಡಿ ನಮನ ಸಲ್ಲಿಸಿದರು.**



ಈ ಸಂದರ್ಭದಲ್ಲಿ ಕೊಡ್ಲೆ ಮಲ್ಲಿಕಾರ್ಜುನ, ವಿ. ಅಂಬ–ರೀಷ್, ವಿ.ದತ್ತಾತ್ರೇಯ, ರಾವಿಹಾಳು ಹುಸೇನ್ ಪೀರ, ಗೊರವರ ಶ್ರೀನಿವಾಸ್, ಬಿ.ವೆಂಕಟೇಶ್, ಹೆಚ್. ಗಣೇಶ್, ಪವನ್ ದೇಸಾಯಿ ಮತ್ತಿತರರು ಇದ್ದರು ವರದಿ: ಮಸೀದಿ, ಅಬ್ದುಲ್ ಗೌಸ್, ಸಿರುಗುಪ್ಪ

## ಅಗ್ನಿವೀರ್ ನೇಮಕಾತಿ ರ್‍ಯಾಲಿ ಕುರಿತು ಮೇ 25ರಂದು ಕಾರ್ಯಗಾರ

**ನೈಜ್ಯ ದೆಸೆ ನ್ಯೂಸ್**

**ಮಾನ್ವಿ: ಅಖಿಲ ಕರ್ನಾಟಕ ಮಾಜಿ ಸೈನಿಕರ ಸಂಘ ರಾಯಚೂರು ಜಿಲ್ಲಾ ಘಟಕ, ಎ.ಆರ್.ಓ. ಬೆಳಗಾಂ ಹಾಗೂ 35 ಎನ್.ಸಿ.ಸಿ. ಬಿಎನ್ ರಾಯಚೂರು ಸಂಯುಕ್ತಾಶ್ರಯದಲ್ಲಿ ಮೇ 25ರಂದು ಬೆಳಿಗ್ಗೆ 11 ಗಂಟೆಗೆ ರಾಯಚೂರಿನ ಕೃಷಿ ವಿಶ್ವವಿದ್ಯಾಲಯದ ಆಡಿಟೋರಿಯಂನಲ್ಲಿ ಅಗ್ನಿವೀರ್ ನೇಮಕಾತಿ ರ್‍ಯಾಲಿಯ ಸಾಮಾನ್ಯ ಪ್ರವೇಶ ಪರೀಕ್ಷೆ ಪ್ರಕ್ರಿಯೆ ಕು–ರಿತು ಒಂದು ದಿನದ ಕಾರ್ಯಗಾರವನ್ನು ಹಮ್ಮಿಕೊಳ್ಳಲಾಗಿದೆ ಎಂದು ಜಿಲ್ಲಾ ಘಟಕದ ಅಧ್ಯಕ್ಷ ಚೆನ್ನಾರೆಡ್ಡಿ ತಿಳಿಸಿದ್ದಾರೆ.**

ರಾಯಚೂರು ಜಿಲ್ಲೆ ಸೇರಿದಂತೆ ಸುತ್ತಮುತ್ತಲಿನ ಗ್ರಾಮಗಳ ಸುಮಾರು



650ಕ್ಕೂ ಹೆಚ್ಚು ಅಭ್ಯರ್ಥಿಗಳು 2027ರಲ್ಲಿ ನಡೆಯುವ ಅಗ್ನಿವೀರ್ ನೇಮಕಾತಿ ರ್‍ಯಾಲಿಯಲ್ಲಿ ಭಾಗವಹಿಸಲು ಆನ್‌ಲೈನ್ ಮೂಲಕ ನೋಂದಣಿ ಮಾಡಿಕೊಂಡಿದ್ದಾರೆ. ಅಂತಹ ಅಭ್ಯರ್ಥಿಗಳಿಗೆ ಕಾರ್ಯಗಾರದಲ್ಲಿ ಅಗತ್ಯ ಮಾರ್ಗದರ್ಶನ ಹಾಗೂ ತರಬೇತಿ ನೀಡಲಾಗುತ್ತದೆ ಎಂದು ತಿಳಿಸಿದರು.

ಕಾರ್ಯಗಾರದಲ್ಲಿ ಎ.ಆರ್.ಓ. ಬೆಳಗಾಂ, 35 ಎನ್.ಸಿ.ಸಿ. ಬಿಎನ್ ಅಧಿಕಾರಿಗಳು, ಅನುಭವ ಹೊಂದಿದ ಹಿರಿಯ ಸೇನಾಧಿಕಾರಿಗಳು, ಮಾಜಿ ಸೈನಿಕರು ಹಾಗೂ ತಜ್ಞರು ಭಾಗವಹಿಸಿ ಸಾಮಾನ್ಯ ಪ್ರವೇಶ ಪರೀಕ್ಷೆಯ ಮಾದರಿ, ತಯಾರಿಯ ತಂತ್ರಗಳು, ದೈಹಿಕ ಮತ್ತು ಲಿಖಿತ ಪರೀಕ್ಷೆಗಳ ಕು–ರಿತು ಸಮಗ್ರ ಮಾಹಿತಿ ನೀಡಲಿದ್ದಾರೆ. ಜಿಲ್ಲೆಯ ಅಗ್ನಿವೀರ್ ನೇಮಕಾತಿ ನೋಂದಾಯಿತ ಅಭ್ಯರ್ಥಿಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಕಾರ್ಯಗಾರದ ಸದುಪಯೋಗ ಪಡೆದುಕೊಳ್ಳುವಂತೆ ಚೆನ್ನಾರೆಡ್ಡಿ ಪ್ರಕಟಣೆಯಲ್ಲಿ ಕೋರಿದ್ದಾರೆ.

## ಕಂಪ್ಲಿಯಲ್ಲಿ ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್ ಜಯಂತ್ಯುತ್ಸವ :ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ

**ನೈಜ್ಯ ದೆಸೆ ನ್ಯೂಸ್**

**ಬಳ್ಳಾರಿ / ಕಂಪ್ಲಿ: ಸ್ಥಳೀಯ ಪಟ್ಟಣದ ಚಲವಾದಿಕೇರಿಯಲ್ಲಿ ಅಂಬೇಡ್ಕರ್ ಅನುಯಾಯಿಗಳ ಬಳಗ, ಜೆಬಿ ಕಿಂ–ಗ್ಸ್ ಆಶ್ರಯದಲ್ಲಿ ಏರ್ಪಡಿಸಿದ್ದ ಸಂವಿಧಾನ ಶಿಲ್ಪಿ ಭಾರತರತ್ನ ಡಾ.ಬಿ.ಆರ್.ಅಂಬೇಡ್ಕರ್ ಜಯಂತ್ಯುತ್ಸವದಲ್ಲಿ ಹತ್ತನೇ ತರಗತಿ ಮತ್ತು ದ್ವಿತೀಯ ಪಿಯುಸಿಯಲ್ಲಿ ಅಧಿಕ ಅಂಕಗಳನ್ನು ಪಡೆದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಮತ್ತು ಅಭಿನಂದನಾ ಪತ್ರಗಳನ್ನು ವಿತರಿಸಿ ಗೌರವಿಸಲಾಯಿತು.**

ಪಿಐ ವಾಸುಕುಮಾರ್, ಕಂಪ್ಲಿ ಜೆಸ್ಕಾಂ ಎಇಇ ಕೆ.ಶ್ರೀನಿವಾಸ ಪ್ರಸಾದ್, ದಿಶಾ ಸಮಿತಿ ಸದಸ್ಯ ಎ.ಸಿ.ದಾನಪ್ಪ,



ಪ್ರಾಚಾರ್ಯ ಸಿದ್ದಣ್ಣ ಪರಮೇಶ್ವರ, ಶಿಕ್ಷಕ ರಮೇಶ್ ಸುಗ್ಗೇನಹಳ್ಳಿ ಹಾಗೂ ಇತರರು ಸಂವಿಧಾನ ಶಿಲ್ಪಿ ಡಾ.ಬಿ.ಆರ್. ಅಂಬೇಡ್ಕರ್ ತತ್ವ,ಆದರ್ಶ, ಜೀವನ ಚ–ರಿತ್ರೆ ಕುರಿತು ಸಮಗ್ರವಾಗಿ ಮಾತನಾಡಿದರು. ಕಾರ್ಯಕ್ರಮದಲ್ಲಿ ಮುಖಂಡರಾದ ಎಂ.ಸಿ.ಮಾಯಪ್ಪ, ಸಿದ್ಧಿ ಅಂಜಿನಪ್ಪ, ಚನ್ನಪ್ಪ, ಟಿ.ಶಿವಪ್ಪ, ಬಳಗದ ಪದಾಧಿಕಾ–ರಿಗಳಾದ ಯೋಗರಾಜ್, ಸುನೀಲ್ ಸುರೇಶ್ ಸೇರಿದಂತೆ ಇತರರು ಇದ್ದರು.

ಡಾ.ಬಿ.ಆರ್.ಅಂಬೇಡ್ಕರ್ ಭಾವಚಿತ್ರದ ಮೆರವಣಿಗೆಗೆ ಅಖಿಲ ಭಾರತ ವೀರಶೈವ ಲಿಂಗಾಯತ ಯುವ ವೇದಿಕೆಯ ಜಿಲ್ಲಾ ಅಧ್ಯಕ್ಷ ಹೊಸಕೋಟೆ ಜಗದೀಶ್ ಚಾಲನೆ ನೀಡಿದರು.

## ವಲ್ಕಂದಿನ್ನಿ ಪಾಟೀಲ್ ಕುಟುಂಬದಿಂದ ಕಾರುಣ್ಯಾಶ್ರಮಕ್ಕೆ ಆಹಾರ ವಸ್ತುಗಳ ವಿತರಣೆ

**ನೈಜ್ಯ ದೆಸೆ ನ್ಯೂಸ್**

**ಸಿಂಧನೂರು: ಪಟ್ಟಣದ ಪಟೇಲ್ ವಾಡಿ ನಿವಾಸಿಗಳಾದ ಶ್ರವಣ ಜ್ಯೋತಿ ಚಂದ್ರಶೇಖರಗೌಡ ಗುತ್ತೇದಾರರು ಈ ದಂಪತಿಗಳ ಮಗಳಾದ ಸಹಸ್ರಾ ಪಾಟೀಲ್ ಇವರ ಪ್ರಥಮ ವರ್ಷದ ಜನ್ಮದಿನದ ಅಂಗವಾಗಿ ಆಶ್ರಮಕ್ಕೆ ಆಹಾರ ವಸ್ತುಗಳನ್ನು ವಿತರಿಸಿ ಹಣ್ಣು ಹಂಪಲುಗಳನ್ನು ಹಾಗೂ ಮಹಾಪ್ರಸಾದ ಸೇವೆಯನ್ನು ಸಲ್ಲಿಸುವ ಮೂಲಕ ಅರ್ಥಪೂರ್ಣವಾಗಿ ಜನ್ಮ ಸಾರ್ಥಕ ದಿನವನ್ನು ಆಚರಿಸಿದರು.**

ಈ ಕಾರ್ಯಕ್ರಮದಲ್ಲಿ ಶ್ರವಣ ಜ್ಯೋತಿ ಚಂದ್ರಶೇಖರಗೌಡ ವಲ್ಕಂದಿನ್ನಿ ಈ ದಂಪತಿಗಳನ್ನು ಆಶ್ರಮದ ವತಿಯಿಂದ ಸನ್ಮಾನಿಸಿ ಗೌರವಿಸಿ ಹಾರೈಸಲಾಯಿತು. ನಂತರ ಚಂದ್ರಶೇಖರಗೌಡ



ವಲ್ಕಂದಿನ್ನಿ ಮಾತನಾಡಿ ಕಾರುಣ್ಯ ಆಶ್ರಮ ಅದೆಷ್ಟೋ ನೆಲೆ ಇಲ್ಲದ ನೊಂದ ಜೀವಿಗಳ ನಾಡಿಮಿಡಿತವಾಗಿ ಸುಂದರ ದೇವಾಲಯವಾಗಿದೆ. ಇಂತಹ ಸೇವೆ ಮಾಡುತ್ತಿರುವ ಹರೇಟನೂರಿನ ಸಾಮಾನ್ಯ ಪಡಜಂಗಮ ಕುಟುಂಬವು ನಮ್ಮ ನಾಡಿನ ಜನರ ಪ್ರೀತಿಗೆ ಪಾತ್ರವಾಗಿರುವುದು ನಮ್ಮ ಸಿಂಧನೂರಿಗೆ ತಂದ ಗೌರವ. ಇಂತಹ ಸೇವಾ ಕಾರ್ಯಗಳು ಪ್ರತಿಯೊಬ್ಬರೂ ಕೂಡ ಸಹಾಯ ಸಹಕಾರ ಮಾಡಿದರೆ ಮಾನವರಾಗಿ ಹುಟ್ಟಿದ್ದು ಸಾರ್ಥಕವಾಗುತ್ತದೆ.

ಸಮಾಜದಲ್ಲಿನ ಹಿರಿಯರನ್ನು ಗೌರವದಿಂದ ಕಂಡಾಗ ಮಾತ್ರ ನಮ್ಮ ಸಂಸ್ಕೃತಿ ಉಳಿಯಲು ಸಾಧ್ಯ. ಆದಷ್ಟು ಇಂತಹ ವೃದ್ಧಾಶ್ರಮಗಳು ಹೆಚ್ಚಾಗದಂತೆ ನೋಡಿಕೊಳ್ಳುವುದು ನಮ್ಮ ನಿಮ್ಮೆಲ್ಲರ ಜವಾಬ್ದಾರಿಯಾಗಿದೆ. ಈ ಕಾರುಣ್ಯ ಆಶ್ರಮದಲ್ಲಿರುವ ಎಲ್ಲಾ ಹಿರಿಯರು ಕೂಡ ನಮ್ಮ ತಂದೆ ತಾಯಿಗಳ ಸ್ವರೂಪಿಗಳು ಮತ್ತು ವಯಸ್ಕರ ಬುದ್ಧಿಮಾಂದ್ಯರು ನಮ್ಮ ಸಹೋದರ ಸಹೋದರಿಯರ ಸಮರ ಸಮಾನರು ಎನ್ನುವ ಭಾವನೆ ನಮ್ಮ ಕುಟುಂಬದ್ದು ಎಂದು ಅರ್ಥಪೂರ್ಣವಾಗಿ ಮಾತನಾಡಿ ಅಕ್ರಮದ ಸೇವೆಗೆ ಮೆಚ್ಚುಗೆ ವ್ಯಕ್ತಪಡಿಸಿದರು.

ಈ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಲಕ್ಷ್ಮೀ. ದೊಡ್ಡನಗೌಡ ವಲ್ಕಂದಿನ್ನಿ. ವಿಶಾಲಾಕ್ಷಿ ಚಂದ್ರಶೇಖರ. ಶ್ರವಣಜ್ಯೋತಿ. ಸಹಸ್ರಾ ಪಾಟೀಲ್. ಲೀಲಾವತಿ.ಚನ್ನಮ್ಮ. ವಿನೋದಕುಮಾರ. ಮಂಜುನಾಥ ದಿದ್ದಿಗಿ. ಚನ್ನಬಸಯ್ಯ. ಗಣೇಶ ಹಾಗೂ ಆಶ್ರಮದ ಕಾರ್ಯಾಧ್ಯಕ್ಷರಾದ ಡಾ. ಚನ್ನಬಸವ ಸ್ವಾಮಿ ಹಿರೇಮಠ. ಶ್ರೀಮಠ ಸೇವಾ ಟ್ರಸ್ಟ್ ನ ಸದಸ್ಯರಾದ ಸುಜಾತ ಹಿರೇಮಠ. ಹಾಗೂ ಆಶ್ರಮದ ಸಿಬ್ಬಂದಿಗಳಾದ ಸುಜಾತ ಮಲದಗುಡ್ಡ.ಸಿದ್ದಯ್ಯ ಸ್ವಾಮಿ.ಮ–ರಿಯಪ್ಪ.ಜ್ಯೋತಿ. ಮೀನಾಕ್ಷಿಮ್ಮ. ಲಕ್ಷ್ಮೀ.ಶರಣು ಸ್ವಾಮಿ ಹಾಗೂ ಅನೇಕರು ಭಾಗವಹಿಸಿದ್ದರು

## ಸಾಹಿತ್ಯ ಸಿಂಚನ

ತಾಯಿ

ತಾಯಿಯ ಮಮತೆ ಸಾಗರದಂತೆ,
ಅವಳ ಪ್ರೀತಿ ಎಂದೂ ಅಳೆಯಲಾಗದಂತೆ.
ಕಷ್ಟದ ಹೊತ್ತಲ್ಲಿ ನೆರಳಾಗಿ ನಿಂತು,
ನಗುವಿನ ಬೆಳಕಾಗಿ ಬದುಕು ತುಂಬುತ್ತು.

ಹಸಿವಾದಾಗ ಅನ್ನವಾಗಿ ಬಂದು,
ಅಳುವಾಗ ಮುದ್ದಾಗಿ ಕಣ್ಣೀರು ಒರೆಸಿದು.
ತನ್ನ ಕನಸು ಮರೆತು ಮಕ್ಕಳ ಕನಸಿಗೆ,
ಜೀವನವನ್ನೇ ಅರ್ಪಿಸುವಳು ಪ್ರೀತಿಗೆ.

ತಾಯಿಯ ಹೃದಯ ದೇವಾಲಯದಂತೆ,
ಅವಳ ಮಾತು ಆಶೀರ್ವಾದದಂತೆ.
ಭೂಮಿಯ ಮೇಲೆ ದೇವರು ಯಾರು ಎಂದರೆ,
ತಾಯಿಯೇ ಮೊದಲ ದೇವತೆ ಎಂದರೆ.

ಸುರೇಶ್

## ಶಾಸಕಿ ಕರೆಮ್ಮಾ ಜಿ ನಾಯಕ ಅವರಿಂದ ಜಾಲಹಳ್ಳಿ ನೂತನ ಪೊಲೀಸ್ ಠಾಣೆ ಕಟ್ಟಡ ಉದ್ಘಾಟನೆ

ನೈಜ್ಯ ದೆಸೆ ನ್ಯೂಸ್

**ಜಾಲಹಳ್ಳಿ: ರಾಯಚೂರು ಜಿಲ್ಲೆಯ ದೇವದುರ್ಗ ತಾಲೂಕಿನ ಜಾಲಹಳ್ಳಿ ಪಟ್ಟಣದಲ್ಲಿ 2020–21ನೇ ಸಾಲಿನ ಹಣ–ಕಾಸು ಯೋಜನೆಯಡಿ ಗೃಹ ಇಲಾಖೆಯಿಂದ ನಿರ್ಮಿಸಲಾದ ನೂತನ ಜಾಲಹಳ್ಳಿ ಪೊಲೀಸ್ ಠಾಣೆ ಕಟ್ಟಡದ ಉದ್ಘಾಟನಾ ಸಮಾರಂಭ ಭವ್ಯವಾಗಿ ನೆರವೇರಿತು. ಕಾರ್ಯಕ್ರಮದ ಅಧ್ಯಕ್ಷತೆ ಹಾಗೂ ಉದ್ಘಾಟನೆಯನ್ನು ಶಾಸಕರಾದ ಶ್ರೀಮತಿ ಕರೆಮ್ಮಾ ಜಿ ನಾಯಕ ಅವರು ನೆರವೇರಿಸಿದರು.**




ಕಾರ್ಯಕ್ರಮದಲ್ಲಿ ಡಿವೈ–ಎಸ್ಪಿ ದತ್ತಾತ್ರೇಯ ಕಾರ್ನಾಡ್ ಅವರು ಅತಿಥಿಗಳನ್ನು ಸ್ವಾಗತಿಸಿ ಸನ್ಮಾನ ಕಾರ್ಯಕ್ರಮ ನಡೆಸಿಕೊಟ್ಟರು. ಮುಖ್ಯ ಅತಿಥಿಯಾಗಿ ಆಗಮಿಸಿದ್ದ ಜಿಲ್ಲಾ ಪೊಲೀಸ್ ವ–ರಿಷ್ಠಾಧಿಕಾರಿ ಅರುಣಾಂಶು ಗಿರಿ ಅವರು ಮಾತನಾಡಿ, “ಪೊಲೀಸ್ ಠಾಣೆ ಎಂಬುದು ಕೇವಲ ಸರ್ಕಾರಿ ಕಚೇ–ರಿಯಲ್ಲ, ಸಾರ್ವಜನಿಕರ ರಕ್ಷಣೆ ಹಾಗೂ ಕಾನೂನು ಸುವ್ಯವಸ್ಥೆ ಕಾಪಾಡುವ ಕೇಂದ್ರವಾಗಿದೆ. ಆಧುನಿಕ ಸೌಲಭ್ಯಗಳೊಂದಿಗೆ ನಿರ್ಮಿತವಾದ ಈ ನೂತನ ಪೊಲೀಸ್ ಠಾಣೆ ಮೂಲಕ ಪೊಲೀಸರು ಸಮಾಜದ ಸುರಕ್ಷತೆಗಾಗಿ ಇನ್ನಷ್ಟು ಪರಿಣಾಮಕಾ–ರಿಯಾಗಿ ಸೇವೆ ಸಲ್ಲಿಸಲಿದ್ದಾರೆ” ಎಂದು ಹೇಳಿದರು. ನಂತರ ಮಾತನಾಡಿದ ಶಾಸಕರಾದ ಕರೆಮ್ಮಾ ಜಿ ನಾಯಕ ಅವರು, “ಎಲ್ಲರೂ ಸಂವಿಧಾನದ ಅಡಿಯಲ್ಲಿ ಕೆಲಸ ಮಾಡಬೇಕು. ನೂತನ ಪೊಲೀಸ್ ವರಿಷ್ಠಾಧಿಕಾರಿಗಳು ಬಂದ ನಂತರ ಅಕ್ರಮ ಚಟುವಟಿಕೆಗಳಿಗೆ ಕಡಿವಾಣ ಬಿದ್ದಿದೆ. ಡಿವೈಎಸ್ಪಿ ದತ್ತಾತ್ರೇಯ ಕಾರ್ನಾಡ್ ಅವರ ನೇತೃತ್ವದಲ್ಲಿ ಸರ್ಕಲ್ ಇನ್ಸ್ಪೆಕ್ಟರ್‌ಗಳು ಹಾಗೂ ಪಿಎಸ್‌ಐಗಳು ಜನರಿಗೆ ಸ್ಪಂದಿಸುವ ಉತ್ತಮ ಕೆಲಸ ಮಾಡುತ್ತಿದ್ದಾರೆ” ಎಂದು ಮೆಚ್ಚುಗೆ ವ್ಯಕ್ತಪಡಿಸಿದರು. ಅವರು ಮುಂದುವರೆದು, “ಜನರು ನ್ಯಾಯಕ್ಕಾಗಿ ಪೊಲೀಸ್ ಠಾಣೆಗೆ ಬರುತ್ತಾರೆ. ಅವರಿಗೆ ನ್ಯಾಯ ಒದಗಿಸುವ ಕೆಲಸ ಅಧಿಕಾ–ರಿಗಳು ಮಾಡಬೇಕು” ಎಂದು ಮನವಿ ಮಾಡಿದರು. ಇದೇ ವೇಳೆ ಸಾರ್ವಜನಿಕರು ಹಾಗೂ ಸಂಘ ಸಂಸ್ಥೆಗಳವರು ಇಸ್ಪೀಟ್ ಹಾಗೂ ಮಟ್ಕಾ ದಂಧೆಗಳ ಬಗ್ಗೆ ದೂರು ನೀಡಿದ್ದು, ಇಂತಹ ಅಕ್ರಮ ಚಟುವಟಿಕೆಗಳಿಗೆ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕೆಂದು ಶಾಸಕರು ಸೂಚಿಸಿದರು. ಕಾರ್ಯಕ್ರಮದಲ್ಲಿ ತಾಲೂಕು ಮಟ್ಟದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಅಧ್ಯಕ್ಷ ಲಕ್ಷ್ಮಣ್ ಜ್ಯೋತಿ, ಅಡವಿಲಿಂಗ ಮಹಾರಾಜರು ವಿರುಗೋಟ್, ಗ್ರಾಮ ಪಂಚಾಯತ್ ಅಧ್ಯಕ್ಷೆ ವಿಜಯಲಕ್ಷ್ಮಿ ವೆಂಕೋಬ ತೋಟದ, ಆಡಿಷನಲ್ ಎಸ್‌ಪಿ ಕುಮಾರಸ್ವಾಮಿ, ಆಡಿಷನಲ್ ಎಸ್‌ಪಿ ಜಿ. ಹರೀಶ್, ಎಇಇ ಲಿಂಗರಾಜು, ಗುತ್ತಿಗೆದಾರ ಭೀಮಾಶಂಕರ್ ಸೇರಿದಂತೆ ಹಲವರು ಉಪಸ್ಥಿತರಿದ್ದರು. ಇದೇ ಸಂದರ್ಭದಲ್ಲಿ ಬೂದಾನಿಗಳಾದ ಕೆಪಿಸಿಸಿ ಪರಿಶಿಷ್ಟ ಪಂಗಡ ವಿಭಾಗದ ಕಾರ್ಯದರ್ಶಿ ತಿಮ್ಮಣ್ಣ ನಾಯಕ ದಿವಾನ್ ಅವ–ರಿಗೆ ವಿಶೇಷ ಸನ್ಮಾನ ಮಾಡಲಾಯಿತು ಕಾರ್ಯಕ್ರಮದಲ್ಲಿ ಊರಿನ ಪ್ರಮುಖರಾದ ವೀರಣ್ಣ ಬಳೆ ಸಾಹುಕಾರ್, ಶ್ರೀಧರ್ ದೇಸಾಯಿ, ಬಸವರಾಜ್ ಪಂಪಪತಿ, ವೇಣುಗೋಪಾಲ್ ನಾಯಕ, ಭೀಮಣ್ಣ ನಾಡಗೌಡ ಚಿಂಚೋಡಿ, ನರಸಣ್ಣ ನಾಯಕ, ಬಾಬಾ ಮೆಡಿಕಲ್, ದುರುಗಪ್ಪ ರಾಮಪಾಳಿ, ಹುಸೇನ್ ನಾಸಿ, ನೂರಮೊಹಮ್ಮದ್ ಬಳಿಗಾರ್, ವೆಂಕೋಬ ತೋಟದ, ಭೂತಪ್ಪ ದೇವರಮನಿ, ಗ್ರಾಮ ಪಂಚಾಯತ್ ಸದಸ್ಯರಾದ ಅಬ್ದುಲ್ ರಹಮಾನ್ ಖುರೇಶಿ ಅಯ್ಯಪ್ಪ ತಾತ,ಬಸವರಾಜ್ ಗೋಪಾಲಪುರ,ಕೃಷಿ ಪತ್ತಿನ ಸಹಕಾರ ಸಂಘದ ಸದ್ಯಸರದ ವೆಂಕೋಬ ಪೂಜಾರಿ, ವೆಂಕಣ್ಣ ಯರಕಮಟ್ಟಿ,ಸೇ–ರಿದಂತೆ ಅನೇಕ ಸಾರ್ವಜನಿಕರು ಭಾಗವಹಿಸಿದ್ದರು.

ವರದಿ: ಖಾಜಾ ಹುಸೇನ್ ಬಾಬಾ, ಜಾಲಹಳ್ಳಿ

# ಬಳಗಾನೂರಿನ ಶಿಕ್ಷಣ ಭವಿಷ್ಯಕ್ಕೆ ಹೊಸ ದಿಕ್ಕು

## ಸರಕಾರಿ ಪಿಯು ಕಾಲೇಜು ಉಳಿಸಿ ಬೆಳೆಸಲು ಚಿಂತನ ಮಂಥನ

ನೈಜ್ಯ ದೆಸೆ ನ್ಯೂಸ್

**ಬಳಗಾನೂರು: ಪಟ್ಟಣದಲ್ಲಿ ನೂತನವಾಗಿ ಆರಂಭವಾಗಿರುವ ಸರಕಾರಿ ಪದವಿಪೂರ್ವ ಕಾಲೇಜಿನ ಸಾಧಕ–ಬಾಧಕಗಳ ಕುರಿತು ಚಿಂತನ ಮಂಥನ ಸಭೆ ಶುಕ್ರವಾರ ಬೆಳಿಗ್ಗೆ ಕಾಲೇಜಿನ ಆವರಣದಲ್ಲಿ ಪ್ರಾಚಾರ್ಯ ರಂಗಯ್ಯ ಶ್ರೇಷ್ಠಿಯವರ ಅಧ್ಯಕ್ಷತೆಯಲ್ಲಿ ನಡೆಯಿತು. ಶಿಕ್ಷಣದ ಬೆಳಕಿನಿಂದ ಪಟ್ಟಣದ ಭವಿಷ್ಯವನ್ನು ರೂಪಿಸಬೇಕೆಂಬ ಆಶಯ ಸಭೆಯಿಡೀ ಪ್ರತಿಧ್ವನಿಸಿತು.**



ಸಭೆಯನ್ನುದ್ದೇಶಿಸಿ ಪ್ರಾಸ್ತಾವಿಕವಾಗಿ ಮಾತನಾಡಿದ ಪ್ರಾಚಾರ್ಯ ರಂಗಯ್ಯ ಶ್ರೇಷ್ಠಿಯವರು, “ಸರಕಾರಿ ಕಾಲೇಜಿನಲ್ಲಿ ಶಿಕ್ಷಣ ಪಡೆಯುವುದರಿಂದ ವಿದ್ಯಾರ್ಥಿಗಳಿಗೆ ಅನೇಕ ಅನುಕೂಲಗಳಿವೆ. ಈ ಬಗ್ಗೆ ಪಾಲಕರಿಗೆ ಹಾಗೂ ವಿದ್ಯಾರ್ಥಿಗಳಿಗೆ ಸಮಗ್ರ ಮಾಹಿತಿ ನೀಡಿ ಹೆಚ್ಚಿನ ದಾಖಲಾತಿ ಮಾಡಿಸಬೇಕಾಗಿದೆ. ನೂತನ ಕಾಲೇಜಿನ ಉಳಿವು ಮತ್ತು ಬೆಳವಣಿಗೆಗೆ ಸಾರ್ವಜನಿಕರ ಸಹಕಾರ ಅತ್ಯಗತ್ಯ. ಗುಣಮಟ್ಟದ ಶಿಕ್ಷಣದ ಮೂಲಕ ಪಟ್ಟಣದ ಪ್ರಗತಿಗೆ ನಾಂದಿ ಹಾಡಬೇಕಿದೆ” ಎಂದು ಹೇಳಿದರು.

ನಂತರ ಮಾತನಾಡಿದ ವಿ.ಎಸ್.ಎಸ್.ಎನ್ ಅಧ್ಯಕ್ಷ ರಾಘವೇಂದ್ರ ಕುಲಕರ್ಣಿ, ಉಪನ್ಯಾಸಕರಾದ ಸುರೇಶ ಬಳಗಾನೂರು, ಗೋವಿಂದರಡ್ಡಿ ಗದ್ದಿ ಹಾಗೂ ನಾಗಯ್ಯ ಗಣಾಚಾರಿ ಅವರು, “ಕಾಲೇಜು ಮಂಜೂರಾಗುವುದು ಎಷ್ಟು ಮುಖ್ಯವೋ, ಅದನ್ನು ಉಳಿಸಿ ಬೆಳೆಸುವುದೂ ಅಷ್ಟೇ ಮುಖ್ಯ. ಬಳಗಾನೂರಿಗೆ ಸರಕಾರಿ ಪಿಯು ಕಾಲೇಜು ಹಾಗೂ ಸರಕಾರಿ ಪದವಿ ಕಾಲೇಜು ಮಂಜೂರಾಗಿರುವುದು ಶಿಕ್ಷಣ ಕ್ಷೇತ್ರದಲ್ಲಿ ಹೊಸ ಯುಗದ ಆರಂಭದ ಸಂಕೇತವಾಗಿದೆ” ಎಂದು ಅಭಿಪ್ರಾಯಪಟ್ಟರು.

ಕಾರ್ಯಕ್ರಮದ ನಿರೂಪಣೆಯನ್ನು ಹಿರಿಯ ಶಿಕ್ಷಕ ರಮೇಶ ಕೂಚಬಾಳ ನಿರ್ವಹಿಸಿದರು.ಸಭೆಯಲ್ಲಿ ಬಳಗಾನೂರು ಪಟ್ಟಣ ಪಂಚಾಯಿತಿಯ ಉಪಾಧ್ಯಕ್ಷ ಹುಸೇನಭಾಷಾ ಬೂದಗುಂಪಾ, ನಿಕಟಪೂರ್ವ ಉಪಾಧ್ಯಕ್ಷ ಮಂಜುನಾಥ ಸ್ವಾಮಿ, ನಾಮನಿರ್ದೇಶಿತ ಸದಸ್ಯ ಮಲ್ಲರಡ್ಡಿ ಗೌಡ, ಶಾಲಾ ಅಭಿವೃದ್ಧಿ ಮಂಡಳಿಯ ಉಪಾಧ್ಯಕ್ಷ ಅಬ್ದುಲ್ ಕಯುಮ್, ಸದಸ್ಯರಾದ ಬಸವರಾಜ ಜವಳಗೇರಾ, ಮರಿಸ್ವಾಮಿ ಬಾಂಬೆ, ಆದಪ್ಪ, ಹಿರಿಯ ಮುಖಂಡರಾದ ಗಣೇಶ ಡಿಶ್, ಸಂಜಯ ಶೇಟ್, ಎಂ.ಡಿ. ಆಲಂ ಭಾಷಾ, ಹಿರಿಯ ಹೋರಾಟಗಾರ ಸುರೇಶ ಡಿ.ಎಸ್.ಎಸ್., ಬಿ. ಮೌನೇಶ ಡಿ.ಎಸ್.ಎಸ್., ಮಹಾಶಕ್ತಕೇಂದ್ರದ ಅಧ್ಯಕ್ಷ ಸಂತೋಷ ಅಂಬ್ಲಿ, ಮಾಜಿ ಸದಸ್ಯ ರಾಜಶೇಖರ್ ಶಂಕ್ರಬಂಡಿ, ಬಸವರಾಜ ಕರಡಕಲ್, ಸಿದ್ದಯ್ಯ ತಾತ ಮಟಪತಿ, ಗೌತಮ್, ಶಿಕ್ಷಕರಾದ ಸಂಗಣ್ಣ ಹೂಗಾರ್, ಬಸವರಾಜ ಪೂಜಾರ್, ಸುರೇಶ ಸೇರಿದಂತೆ ಹಲವರು ಉಪಸ್ಥಿತರಿದ್ದರು. ವರದಿ: ಸುರೇಶ ಬಳಗಾನೂರು

## ಶಾಂತಿ ಸೌಹಾರ್ದತೆಯಿಂದ ಬಕ್ರೀದ್ ಹಬ್ಬ ಆಚರಿಸಿ, ಸಿಪಿಐ ಮಹಮ್ಮದ್ ಫಸಿಯೂದ್ದಿನ

ನೈಜ್ಯ ದೆಸೆ ನ್ಯೂಸ್

**ಮುದ್ದೇಬಿಹಾಳ: ಕುರಾನ್ ಉಲ್ಲೇಖದ ಪ್ರಕಾರ ಇಬ್ರಾಹಿಂ ಅವರಿಗೆ ಕನಸಿನಲ್ಲಿ ದೇವರಿಂದ ಪವಿತ್ರವಾದ ಜೀವವನ್ನು ಬಲಿ ಕೊಡಬೇಕೆಂಬ ಸಂದೇಶ ಬರುತ್ತದೆ. ಆಗ ತಮ್ಮ ಮಗನನ್ನೇ ಬಲಿ ಕೊಡಲು ಮುಂದಾದ ಸಂದರ್ಭದಲ್ಲಿ ಅವರ ಭಕ್ತಿಗೆ ಮೆಚ್ಚಿದ ದೇವರು ಮಗನ ಬದಲಿಗೆ ಕು–ರಿಯನ್ನು ಬಲಿಯಾಗಿ ನೀಡಿದ ಹಿನ್ನೆಲೆಯಲ್ಲೇ ಬಕ್ರೀದ್ ಹಬ್ಬ ಆಚರಣೆಗೆ ಬಂದಿದೆ ಎಂದು ಸಿಪಿಐ ಮಹಮ್ಮದ್ ಫಸಿಯೂದ್ದಿನ ಹೇಳಿದರು.**



ಪಟ್ಟಣದ ಪೊಲೀಸ್ ಠಾಣೆಯಲ್ಲಿ ಗುರುವಾರ ನಡೆದ ಬಕ್ರೀದ್ ಹಬ್ಬದ ಶಾಂತಿ ಪಾಲನಾ ಸಭೆಯಲ್ಲಿ ಅವರು ಮಾತನಾಡಿದರು. ತಾಲ್ಲೂಕಿನಾದ್ಯಂತ ಯಾವುದೇ ಅಹಿತಕರ ಘಟನೆಗಳು ನಡೆಯದಂತೆ ಶಾಂತಿ, ಸೌಹಾರ್ದತೆ ಮತ್ತು ಸಹೋದರತ್ವದಿಂದ ಹಬ್ಬವನ್ನು ಆಚರಿಸುವಂತೆ ಮನವಿ ಮಾಡಿದರು. ಅಪರಾಧ ವಿಭಾಗದ ಪಿಎಸ್‌ಐ ಆರ್. ಎಸ್. ಬಂಗಿ ಮಾತನಾಡಿ, ಬಕ್ರೀದ್ ಹಬ್ಬವು ತ್ಯಾಗ ಮತ್ತು ಬಲಿದಾನದ ಸಂಕೇತವಾಗಿದ್ದು, ಎಲ್ಲರೂ ಶಾಂತಿಯುತವಾಗಿ ಹಬ್ಬ ಆಚರಿಸಬೇಕು ಎಂದು ಹೇಳಿದರು.

ಸಭೆಯಲ್ಲಿ ಭಾಗವಹಿಸಿದ್ದ ಮುಖಂಡರಾದ ಹರೀಶ್ ನಾಟಿಕಾರ, ಸದ್ದಾಂ ಕುಂಟೋಜಿ, ರಫೀಕ ಶಿರೋಳ, ಸಿಕಂದರ್ ಜಾನವೇಕರ ಹಾಗೂ ಬಾಬಾ ಪಟೇಲ್ ಮಾತನಾಡಿ, ಬಕ್ರೀದ್ ಹಬ್ಬದ ಮಹತ್ವ ಮತ್ತು ಆಚರಣೆ ಕುರಿತು ವಿವರಿಸಿ, ತಾಲ್ಲೂಕಿನಲ್ಲಿ ಎಂದಿನಂತೆ ಶಾಂತಿ ಸೌಹಾರ್ದತೆಯಿಂದ ಹಬ್ಬ ಆಚರಿಸಲಾಗುತ್ತದೆ ಎಂದು ತಿಳಿಸಿದರು. ಈ ಸಂದರ್ಭದಲ್ಲಿ ಪ್ರೊಬೆಷನರಿ ಪಿಎಸ್‌ಐ ಸತೀಶ, ಸಿಬ್ಬಂದಿಗಳಾದ ಸಲೀಂ ಹತ್ತರಕಿ, ಪ್ರಕಾಶ ಪೂಜಾರಿ, ರಾಘು ಇಂಗಳಗಿ ಸೇರಿದಂತೆ ಹಲವರು ಉಪಸ್ಥಿತರಿದ್ದರು.

## ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ ವಸತಿ ನಿಲಯ ಪ್ರವೇಶ ಅವಕಾಶ

ನೈಜ್ಯ ದೆಸೆ ನ್ಯೂಸ್

**ಮಾನ್ವಿ: ತಾಲೂಕು ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿಗಳ ಕಾರ್ಯಾಲಯದಿಂದ 2026–27 ನೇ ಸಾಲಿನ ಮೆಟ್ರಿಕ್ ನಂತರದ ವಸತಿ ನಿಲಯಗಳ ಪ್ರವೇಶಕ್ಕಾಗಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಮಾನ್ವಿ ತಾಲೂಕಿನ ಪಿ.ಯು.ಸಿ ಹಾಗೂ ಪಿ.ಯು.ಸಿ ಸಮಾನಾಂತರ ಕೋರ್ಸ್‌ಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳು ಈ ಸೌಲಭ್ಯಕ್ಕೆ ಅರ್ಜಿ ಸಲ್ಲಿಸಬಹುದಾಗಿದೆ.**

ಮಾನ್ವಿ, ಕವಿತಾಳ ಹಾಗೂ ಸಿರವಾರ ಬಾಲಕರ ವಸತಿ ನಿಲಯಗಳು ಮತ್ತು ಮಾನ್ವಿ ಬಾಲಕಿಯರ ವಿದ್ಯಾರ್ಥಿನಿಲಯಗಳಲ್ಲಿ ಹೊಸದಾಗಿ ಪ್ರವೇಶ ಬಯಸುವ ಪ್ರವರ್ಗ–1, 2ಎ, 2ಬಿ, 3ಎ, 3ಬಿ, ಅನುಸೂಚಿತ ಜಾತಿ, ಅನುಸೂಚಿತ ಪಂಗಡ ಹಾಗೂ ಇತರೆ ಸಮುದಾಯಗಳಿಗೆ ಸೇರಿದ ವಿದ್ಯಾರ್ಥಿಗಳು



ಜೂನ್ 15 ರೊಳಗಾಗಿ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಬೇಕು. ಅರ್ಜಿ ಸಲ್ಲಿಸಲು [ಹಿಂದುಳಿದ ವರ್ಗಗಳ ಇಲಾಖೆಯ ಅಧಿಕೃತ ವೆಬ್‌ಸೈಟ್](https://shp.karnataka.gov.in/?utm_source=chatgpt.com) ಅನ್ನು ಭೇಟಿ ಮಾಡಬಹುದಾಗಿದೆ.

ಅರ್ಜಿ ಸಲ್ಲಿಸಿದ ವಿದ್ಯಾರ್ಥಿಗಳನ್ನು ಮೆರಿಟ್ ಹಾಗೂ ಕೌನ್ಸೆಲಿಂಗ್ ಮೂಲಕ ಆಯ್ಕೆ ಮಾಡಲಾಗುವುದು. ಹೆಚ್ಚಿನ ಮಾಹಿತಿಗಾಗಿ ತಾಲೂಕು ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿಗಳ ಕಾರ್ಯಾಲಯ, ಎ.ಪಿ.ಎಂ.ಸಿ ಯಾರ್ಡ್ 2ನೇ ಗೇಟ್, ಮಾನ್ವಿ ಕಚೇರಿಯನ್ನು ಸಂಪರ್ಕಿಸಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ 9008900527 ಸಂಖ್ಯೆಗೆ ಸಂಪರ್ಕಿಸುವಂತೆ ತಾಲೂಕು ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿ ಭಾಗಯ್ಯ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ‘ಮದ್ದಾನೆ’ ಚಿತ್ರದ ಟೈಟಲ್ ಮತ್ತು ಪೋಸ್ಟರ್ ಬಿಡುಗಡೆ ಮಾಡಿದ ಡಾ। ಶಿವರಾಜಕುಮಾರ್




ನೈಜ್ಯ ದೆಸೆ ನ್ಯೂಸ್

**ಬೆಂಗಳೂರು: ಎಲ್ ಎಮ್ ಫಿಲ್ಮ್ಸ್ ಬೆಂಗಳೂರ ಅವರ "ಮದ್ದಾನೆ" ಕನ್ನಡ ಚಲನಚಿತ್ರದ ಟೈಟಲ್‌ಲಾಂಚ್ ಮತ್ತು ಪೋಸ್ಟರ್ ಬಿಡುಗಡೆಯನ್ನು ಕರುನಾಡ ಚಕ್ರವರ್ತಿ ಡಾ। ಶಿವರಾಜಕುಮಾರ್ ಮತ್ತು ಗೀತಾ ಶಿವರಾಜ–ಕುಮಾರ್ ಬಿಡುಗಡೆಗೆ ಮಾಡಿದರು.**

ನಂತರ ಮಾತನಾಡಿ ಚಿತ್ರ ಯಶಸ್ವಿಯಾಗಲಿ ಎಂದು ಚಿತ್ರ ತಂಡಕ್ಕೆ ಶುಭ ಹಾರೈಸಿದರು. ‘ಮದ್ದಾನೆ’ ಚಿತ್ರದಲ್ಲಿ ಚಿಕ್ಕ ವಯಸ್ಸಿನಲ್ಲಿ ಮನೆ ಬಿಟ್ಟು ಹೋಗಿ, ಮುಂಬೈನಲ್ಲಿ ಆಂಟಿ–ಟೆರರಿಸಂ ಸ್ಕ್ವಾಡ್ ಆಗಿ ಲವ್ ಜಿಹಾದ್, ಡ್ರಗ್ಸ್ ಮಾಫೀಯಾ ದಂಧೆಯಲ್ಲಿ ಭಾಗಿಯಾದವರನ್ನು ಕಂಡು ಹಿಡಿಯಲು ರೌಡಿಸಂಗೆ ಇಳಿದು ಕಷ್ಟದಲ್ಲಿರುವ ತನ್ನ ಕುಟುಂಬವನ್ನ ಹೇಗೆ ರಕ್ಷಿಸಿಕೊಳ್ಳುತ್ತಾನೆ ಎಂಬುದನ್ನು ಹೇಳಿದ್ದು ಪ್ರೇಕ್ಷಕರು ಚಿತ್ರಮಂದಿರದಲ್ಲೇ ನೋಡಬೇಕು ಎಂದು ನಿರ್ದೇಶಕ ಕೆ.ರಾಜಶರಣ್ ಹೇಳಿದರು.

ನಾಯಕನಾಗಿ ಈ ಮೊದಲು "ಕ್ಯಾಂಪಸ್ ಕ್ರಾಂತಿ" ಯಲ್ಲಿ ಕಾಲೇಜ್ ಹುಡುಗನ ಪಾತ್ರದಲ್ಲಿ ಅಭಿನಯಿಸಿದ್ದ ಆರ್ಯರವರಿಗೆ ಇದು ಎರಡನೇ ಚಿತ್ರ, ಈ ಮೊದಲು "ಎಮ್ಮೆತಿಮ್ಮ", "ಮೊದಲ ಮಳೆ" ಚಿತ್ರಗಳಿಗೆ ಆಕ್ಷನ್ ಕಟ್ ಹೇಳಿದ್ದ ನಿರ್ದೇಶಕ ಕೆ ರಾಜಶರಣ್‌ರಿಗೆ ಇದು ಮೂರನೇ ಚಿತ್ರ, ಚಿತ್ರರಂಗಕ್ಕೆ ಒಳ್ಳೆಯ ಅಭಿರುಚಿಯ ಸಿನಿಮಾಗಳನ್ನು ಕೊಡಲು ಹದಿನೈದು ವರ್ಷದ ಹಿಂದೆ ಕಲ್ಯಾಣ ಕರ್ನಾಟಕದ ಸುರಪುರ ತಾಲೂಕಿನ ಜೋಗುಂಡಭಾವಿ ಗ್ರಾಮದಿಂದ ಮನೆ ತೊರೆದು ಬಂದು ಗಾಂಧಿನಗರದಲ್ಲಿ ಕನಸು ನನಸಾಗಿಸಿಕೊಂಡವರು. ಬೆಂಗಳೂರು,ಮಂಡ್ಯ,ಮೈಸೂರಿನಲ್ಲಿ ಸುಮಾರು.

30 ದಿನಗಳ ಕಾಲ ಚಿತ್ರೀಕರಣ ನಡೆಸಲಾಗಿದೆ, ತಾರಾಬಳಗದಲ್ಲಿ ಶ್ರೀನಿವಾಸ್‌ಮೂರ್ತಿ, ಲತಾಮೂರ್ತಿ, ರಾಣಿ, ಸುಜಾತ ಹೀರೆಮಠ, ಏಕಾಂಬರಂ, ಸುಧಾಕರ್, ರಾಮಕೃಷ್ಣ, ಪೂಜಿತ್ ಮೊದಲಾದವರು ಅಭಿನಯಿಸಿದ್ದಾರೆ. ತಾಂತ್ರಿಕ ವರ್ಗದಲ್ಲಿ ನಾಗಭೂಷಣ್ ಪೂಜಾರ್ ಛಾಯಾಗ್ರಹಣ, ಚಿತ್ರದಲ್ಲಿ ಮೂರು ಹಾಡುಗಳಿದ್ದು ಪ್ರಸನ್ನ ಭೋಜಶೆಟ್ಟರ್ ಸಂಗೀತ ಸಂಯೋಜಿಸಿದ್ದಾರೆ, ಡಾ.ಮಾರುತಿ ಎನ್.ಈ ಮತ್ತು ಎಸ್ ವಿ ಶಿವಕುಮಾರ್ ದಾವಣಗೆರೆ ಸಾಹಿತ್ಯ, ಸ್ಟಾರ್ ನಾಗಿಯವರ ನೃತ್ಯ ಸಂಯೋಜನೆ, ರಾಜೇಶ್ ಚೌಹಾಣ್ ಸಂಕಲನ , ಡಾ.ಪ್ರಭು ಗಂಜಿಹಾಳ, ಡಾ.ವೀರೇಶ ಹಂಡಗಿ , ಎಂ.ಜಿ.ಕಲ್ಲೇಶ ಪಿಆರ್.ಓ., ಸಹ ನಿರ್ಮಾಪಕರು ಡಾ.ಮಾರುತಿ ಎನ್.ಇ ಆಗಿದ್ದಾರೆ. ಶ್ರೀಮತಿ ಲತಾ ಮೂರ್ತಿಯವರು ಚಿತ್ರಕ್ಕೆ ಬಂಡವಾಳ ಹೂಡಿದ್ದು ಈಗ ಸೆನ್ಸಾರ್ ಮುಗಿಸಿಕೊಂಡು ಜೂನ್ 12 ಕ್ಕೆ ತೆರೆಗೆ ಬರಲು ಸಜ್ಜಾಗಿದೆ ಎಂದು ನಿರ್ಮಾಪಕಿ ಲತಾಮೂರ್ತಿ ತಿಳಿಸಿದರು.

## ಶಾಸಕಿ ಕರೆಮ್ಮ ಜಿ ನಾಯಕ ಅವರಿಂದ ಜಾಲಹಳ್ಳಿಯಲ್ಲಿ 58 ಲಕ್ಷ ವೆಚ್ಚದ ಶಾಲಾ ಕೊಠಡಿಗಳ ಉದ್ಘಾಟನೆ

ನೈಜ್ಯ ದೆಸೆ ನ್ಯೂಸ್

**ಜಾಲಹಳ್ಳಿ: ಇಂದು ಬೆಳಿಗ್ಗೆ 11 ಗಂಟೆಗೆ ರಾಯಚೂರು ಜಿಲ್ಲೆಯ ದೇವದುರ್ಗ ತಾಲೂಕಿನ ಜಾಲಹಳ್ಳಿ ಗ್ರಾಮದಲ್ಲಿ 2024–25ನೇ ಸಾಲಿನ ಕೆಕೆಆರ್‌ಡಿಬಿ ಮೈಕ್ರೋ ಯೋಜನೆ ಅಡಿಯಲ್ಲಿ ನಿರ್ಮಿಸಲಾದ ಉನ್ನತೀಕ–ರಿಸಿದ ಸರ್ಕಾರಿ ಮಾದರಿಯ ಬಾಲಕರ ಹಿರಿಯ ಪ್ರಾಥ–ಮಿಕ ಶಾಲೆಯ ?58 ಲಕ್ಷ ಮೊತ್ತದ 4 ಹೆಚ್ಚುವರಿ ಕೊಠಡಿಗಳ ಉದ್ಘಾಟನಾ ಕಾರ್ಯಕ್ರಮವನ್ನು ಶಾಸಕರಾದ ಕರೆಮ್ಮ ಜಿ ನಾಯಕ ಅವರು ನೆರವೇರಿಸಿದರು.**



ಉದ್ಘಾಟನಾ ಕಾರ್ಯಕ್ರಮಕ್ಕೆ ಆಗಮಿಸಿದ ಶಾಸಕರನ್ನು ದೇವದುರ್ಗ ಶಿಕ್ಷಣ ಇಲಾಖೆ ಅಧಿಕಾ–ರಿಗಳಾದ ಸಿಆರ್‌ಪಿ ಸೋಮಶೇಖರ್, ಮಂಜುಳ ಹೊಸಮನಿ, ಕೃಷ್ಣಮೂರ್ತಿ, ಶಾಲೆಯ ಮುಖ್ಯಗುರು ಸಿ. ದುರ್ಗಪ್ಪ, ಸಿಬ್ಬಂದಿ ವರ್ಗ, ಎಸ್‌ಡಿಎಂಸಿ ಅಧ್ಯಕ್ಷರು ಹಾಗೂ ಸದಸ್ಯರು ಅದ್ದೂರಿಯಾಗಿ ಸ್ವಾಗತಿಸಿದರು. ನಂತರ ಮಾತನಾಡಿದ ಶಾಸಕರಾದ ಕರೆಮ್ಮ ಜಿ ನಾಯಕ ಅವರು, “ಎಲ್ಲಾ ಶಾಲೆಗಳನ್ನು ಉನ್ನತೀಕ–ರಿಸುವುದೇ ನನ್ನ ಮುಖ್ಯ ಉದ್ದೇಶ. ಶಿಕ್ಷಣ ಕ್ಷೇತ್ರಕ್ಕೆ ಹೆಚ್ಚಿನ ಆದ್ಯತೆ ನೀಡುತ್ತಿದ್ದು, ಮುಂದಿನ ದಿನಗಳಲ್ಲಿ ದೇವದುರ್ಗ ತಾಲೂಕಿನ ಶಿಕ್ಷಣ ಅಭಿವೃದ್ಧಿಗಾಗಿ ಇನ್ನಷ್ಟು ಅನುದಾನ ಮೀಸಲಿಡಲಾಗುವುದು” ಎಂದು ಹೇಳಿದರು. ಜಾಲಹಳ್ಳಿಗೆ ಈಗಾಗಲೇ 10 ಕೋಟಿ ಅನುದಾನವನ್ನು ನೀಡಿರುವುದಾಗಿ ಹೇಳಿದರು.

ಈವರೆಗೆ ಸುಮಾರು ?140 ಕೋಟಿ ಅನುದಾನವನ್ನು ಶಿಕ್ಷಣ ಕ್ಷೇತ್ರಕ್ಕೆ ನೀಡಿರುವುದಾಗಿ ತಿಳಿಸಿದ ಅವರು, ಈ ವರ್ಷ ತಾಲೂಕಿನ ವಿದ್ಯಾರ್ಥಿಗಳು ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ 622 ಅಂಕ ಗಳಿಸಿರುವುದು ತಾಲೂಕಿನ ಹೆಮ್ಮೆಯ ವಿಷಯವಾಗಿದೆ ಎಂದು ಸಂತಸ ವ್ಯಕ್ತಪಡಿಸಿದರು. ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಶಿವರಾಜ್ ಪೂಜಾರಿ (ಪ್ರಭಾರಿ ಬಿಇಒ, ಶಿಕ್ಷಣ ಇಲಾಖೆ ದೇವದುರ್ಗ), ಬಾಲಪ್ಪ ಟಿಪಿಓ, ಶರಣಪ್ಪ ಬಳೆ, ಶರಣಗೌಡ ಸುಂಕೇಶ್ವರ ಹಾಳ, ಬಸನಗೌಡ ದೇಸಾಯಿ (ವಕೀಲರು), ರಂಗಪ್ಪ ದೊರೆ,

ಇಸಾಕ್ ಮೇಸ್ತ್ರಿ, ಎಇಇ ಶ್ರೀನಿವಾಸ್, ವಿಠೋಬ ನಾಯಕ್ (ನಿವೃತ್ತ ಶಿಕ್ಷಕರು), ನಾಗಪ್ಪ ಪಮರ್ತಿ ಗಲಗ, ಮಹಿಬೂಬ್ ಹೆಗ್ಗಡದಿನ್ನಿ, ರಂಗನಾಥ ತ್ಯಾಪ್ಲಿ (ಎಸ್‌ಡಿಎಂಸಿ ಅಧ್ಯಕ್ಷರು), ಸಿದ್ದಲಿಂಗಗೌಡ ನಾಗಡದಿನ್ನಿ, ಉಮಾಪತಿ ಸೌಕರ್, ಶಿವನಗೌಡ ಕಕ್ಕಲದೊಡ್ಡಿ, ಶಿವನಗೌಡ ಜಾಲಹಳ್ಳಿ, ಅಪ್ಪು ಪಾಟೀಲ್ ಮುದುಗೋಟ್, ತಿಮ್ಮಣ್ಣ ನಾಯಕ್, ಮಕ್ತುಮ್, ಗುರು ತೋಟದ, ರಾಜು ದೊರೆ, ಮಲ್ಲು, ರಂಗಪ್ಪ, ರುದ್ರಗೌಡ ಪಡಿಶೆಟ್ಟಿ, ಶಂಕರ್ ಹೂಗಾರ್, ಗೋವಿಂದರಾಜ ದೊರೆ ಸೇರಿದಂತೆ ಊರಿನ ಪ್ರಮುಖರು, ಜೆಡಿಎಸ್ ಮುಖಂಡರು, ಶಿಕ್ಷಕ ವೃಂದ ಹಾಗೂ ಎಸ್‌ಡಿಎಂಸಿ ಸದಸ್ಯರು ಭಾಗವಹಿಸಿದ್ದರು.

ವರದಿ: ಖಾಜಾ ಹುಸೇನ್ ಬಾಬಾ, ಜಾಲಹಳ್ಳಿ

## ನೇಮಕಾತಿ ಪ್ರಕಟಣೆ

ವಿದೇಶಾಂಗ ವ್ಯವಹಾರಗಳ ಸಚಿವಾಲಯ ನೇಮಕಾತಿ 2026 60 ಸೆಕ್ಷನ್ ಆಫೀಸರ್ ಹುದ್ದೆಗಳಿಗೆ ಆಫ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಿ ಮೇ 22, 2026 ವಿದೇಶಾಂಗ ವ್ಯವಹಾರಗಳ ಸಚಿವಾಲಯ ನೇಮಕಾತಿ 2026: 60 ಸೆಕ್ಷನ್ ಆಫೀಸರ್ ಹುದ್ದೆಗಳಿಗೆ ಅರ್ಜಿ ಸಲ್ಲಿಸಿ. ವಿದೇಶಾಂಗ ವ್ಯವಹಾರಗಳ ಸಚಿವಾಲಯವು ಮೇ 2026 ರ ಅಧಿಕೃತ ಅಧಿಸೂಚನೆಯ ಮೂಲಕ ಸೆಕ್ಷನ್ ಆಫೀಸರ್ ಹುದ್ದೆಗಳನ್ನು ಭರ್ತಿ ಮಾಡಲು ಅರ್ಹ ಮತ್ತು ಆಸಕ್ತ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಿದೆ. ಅಖಿಲ ಭಾರತ ಸರ್ಕಾರದಲ್ಲಿ ವೃತ್ತಿಜೀವನವನ್ನು ಹುಡುಕುತ್ತಿರುವ ಉದ್ಯೋಗಾಕಾಂಕ್ಷಿಗಳು ಈ ಅವಕಾಶವನ್ನು ಬಳಸಿಕೊಳ್ಳಬಹುದು. ಆಸಕ್ತ ಅಭ್ಯರ್ಥಿಗಳು 17–ಜುಲೈ–2026 ರಂದು ಅಥವಾ ಮೊದಲು ಆಫ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಬಹುದು. ಆಫ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಲು ಪ್ರಾರಂಭ ದಿನಾಂಕ: 22–05–2026 ಆಫ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 17–ಜುಲೈ–2026 ಅಧಿಕೃತ ವೆಬ್‌ಸೈಟ್: mea.gov.in

## ಸೇನಾ ಮಾಹಿತಿ ಪಾಕ್‌ಗೆ ರವಾನಿಸುತ್ತಿದ್ದ ದೇಶದ್ರೋಹಿಗಳ ಬಂಧನ

**ನೈಜ್ಯ ದೆಸೆ ನ್ಯೂಸ್**

**ಚಂಡೀಗಢ: ಹೆದ್ದಾರಿಯಲ್ಲಿ ಸಿಸಿ ಟಿವಿ ಅಳವಡಿಸಿ ಭಾರತೀಯ ಸೇನೆ ಮತ್ತು ಅರೆಸೈನಿಕ ಪಡೆಗಳ ಚಲನವಲನಗಳ ಬಗ್ಗೆ ಪಾಕಿಸ್ತಾನಕ್ಕೆ ಮಾಹಿತಿ ನೀಡುತ್ತಿದ್ದ ದೇಶದ್ರೋಹಿಗಳಿಗೆ ಹೆಡೆಮುರಿ ಕಟ್ಟಲಾಗಿದೆ. ಪಂಜಾಬ್‌ನ ಪಠಾಣ್‌ಕೋಟ್‌ನ ಪೊಲೀಸರು ಶಂಕಿತ ಬೇಹುಗಾರಿಕೆ ಜಾಲವನ್ನು ಭೇದಿಸಿದ್ದಾರೆ. ಭಾರತೀಯ ಸೇನೆ ಮತ್ತು ಅರೆಸೈನಿಕ ಪಡೆಗಳ ಚಲನವಲನಗಳ ಬಗ್ಗೆ ಸೂಕ್ಷ್ಮ ಮಾಹಿತಿಯನ್ನು ಪಾಕಿಸ್ತಾನದ ಹ್ಯಾಂಡ್ಲರ್‌ಗಳೊಂದಿಗೆ ಹಂಚಿಕೊಳ್ಳುತ್ತಿದ್ದ ವ್ಯಕ್ತಿಯನ್ನು ಬಂಧಿಸಿದ್ದಾರೆ.**




ಚಕ್ ಧಾರಿವಾಲ್ ಗ್ರಾಮದ ನಿವಾಸಿ ಬಲ್ಜಿತ್ ಸಿಂಗ್ ಅಲಿಯಾಸ್ ಬಿಟ್ಟು ಬಂಧಿತ ಆರೋಪಿ. ಈತ ಸೇನೆ ಮತ್ತು ಅರೆಸೈನಿಕ ಪಡೆಗಳ ಚಲನವಲನಗಳ ಮೇಲೆ ಕಣ್ಣಿಡಲು ರಾಷ್ಟ್ರೀಯ ಹೆದ್ದಾರಿ –44 ರ ಪಠಾಣ್‌ಕೋಟ್–ಜಮ್ಮು ಪ್ರದೇಶದ ಸೇತುವೆಯ ಬಳಿಯ ಅಂಗಡಿಯೊಂದರಲ್ಲಿ ಸಿಸಿಟಿವಿ ಕ್ಯಾಮೆರಾವನ್ನು ಅಳವಡಿಸಿದ್ದ ಎಂದು ಪೊಲೀಸರು ತಿಳಿಸಿದ್ದಾರೆ. ಪಾಕಿಸ್ತಾನ ಮತ್ತು ವಿದೇಶಗಳಲ್ಲಿರುವ ಕಾರ್ಯಕರ್ತ–ರಿಗೆ ಕಣ್ಗಾವಲು ಮಾಹಿತಿಯನ್ನು ಎಲೆಕ್ಟ್ರಾನಿಕ್ ರೂಪದಲ್ಲಿ ರವಾನಿಸಲಾಗಿದೆ ಎಂದು ಹಿರಿಯ ಪೊಲೀಸ್ ಅಧಿಕಾರಿ ದಲ್ಜಿಂದರ್ ಸಿಂಗ್ ಧಿಲ್ಲೋನ್ ತಿಳಿಸಿದ್ದಾರೆ. ವಿಚಾರಣೆಯ ಸಮಯದಲ್ಲಿ, ಸಿಂಗ್ ಜನವರಿಯಲ್ಲಿ ಸುಜನ್‌ಪುರ ಬಳಿಯ ಹೆದ್ದಾರಿಯಲ್ಲಿರುವ ಅಂಗಡಿಯಲ್ಲಿ ಇಂಟರ್ನೆಟ್ ಆಧಾರಿತ ಸಿಸಿಟಿವಿ ಕ್ಯಾಮೆರಾವನ್ನು ಅಳವಡಿಸಿದ್ದಾಗಿ ಒಪ್ಪಿಕೊಂಡಿದ್ದಾನೆ. ಅವನಿಗೆ ದುಬೈನಲ್ಲಿರುವ ಅಪರಿಚಿತ ವ್ಯಕ್ತಿಯಿಂದ ನಿರ್ದೇಶನಗಳು ಬರುತ್ತಿದ್ದವು. ತನ್ನ ಕೃತ್ಯಕ್ಕೆ 40,000 ರೂ. ಹಣ ಪಡೆಯುತ್ತಿದ್ದ. ಆರೋಪಿಯಿಂದ ಸಿಸಿಟಿವಿ ಕ್ಯಾಮೆರಾ, ಇಂಟರ್ನೆಟ್ ವೈಫೈ ರೂಟರ್ ಸೇರಿದಂತೆ ಹಲವು ವಸ್ತುಗಳನ್ನು ವಶಪಡಿಸಿಕೊಳ್ಳಲಾಗಿದೆ. ಪಠಾಣ್‌ಕೋಟ್–ಜಮ್ಮು ಹೆದ್ದಾರಿಯಲ್ಲಿ ಅನುಮಾನಾಸ್ಪದ ಚಟುವಟಿ–ಕೆಗಳ ಬಗ್ಗೆ ಗುಪ್ತಚರ ಮಾಹಿತಿ ಪಡೆದ ನಂತರ ಪೊಲೀಸರು ಕ್ರಮ ಕೈಗೊಂಡರು. ನಂತರ ಸುಜನ್‌ಪುರ ಪೊಲೀಸರು ನಾಲ್ವರ ವಿರುದ್ಧ ಪ್ರಕರಣ ದಾಖಲಿಸಿದ್ದಾರೆ. ಸಿಂಗ್ ಜೊತೆಗೆ ವಿಕ್ರಮ್‌ಜಿತ್ ಸಿಂಗ್ ಅಲಿಯಾಸ್ ವಿಕ್ಕಾ, ಬಲ್ವಿಂದರ್ ಸಿಂಗ್ ಅಲಿಯಾಸ್ ವಿಕ್ಕಿ ಮತ್ತು ತರಣ್‌ಪ್ರೀತ್ ಸಿಂಗ್ ಅಲಿಯಾಸ್ ತನ್ನು ವಿರುದ್ಧವೂ ಪ್ರಕರಣ ದಾಖಲಿಸಲಾಗಿದೆ. ಆರೋಪಿಗಳು ಅಪರಾಧ ಮತ್ತು ದೇಶ ವಿರೋಧಿ ಚಟುವಟಿ–ಕೆಗಳಲ್ಲಿ ತೊಡಗಿದ್ದರು ಎಂದು ಪೊಲೀಸರು ತಿಳಿಸಿದ್ದಾರೆ. ಜಾಲದ ಗಡಿಯಾಚೆಗಿನ ಸಂಪರ್ಕಗಳನ್ನು ನಕ್ಷೆ ಮಾಡಲು ಮತ್ತು ಆಪಾದಿತ ಬೇಹುಗಾರಿಕೆಯ ಹಿಂದಿನ ಹಣಕಾಸಿನ ಮೂಲವನ್ನು ಪತ್ತೆಹಚ್ಚಲು ಹೆಚ್ಚಿನ ತನಿಖೆ ನಡೆಯುತ್ತಿದೆ. ಉಳಿದ ಆರೋಪಿಗಳನ್ನು ಬಂಧಿಸಲು ಕಾರ್ಯಾಚರಣೆ ನಡೆಯುತ್ತಿದೆ.

# ಸುವರ್ಣ ಗ್ರಾಮ ಯೋಜನೆ ನಿವೇಶನಕ್ಕಾಗಿ ಪಂಚಾಯತ ಮುಂದೆ ಪ್ರತಿಭಟನೆ

## ವಾರದ ಗಡುವು ನಂತರ ಹಕ್ಕು ಪತ್ರ ನೀಡಲು ಅಧಿಕಾರಿಗಳ ಭರವಸೆ

**ನೈಜ್ಯ ದೆಸೆ ನ್ಯೂಸ್**

**ಅರಕೇರಾ: ತಾಲೂಕಿನ ಕ್ಯಾದಿಗೇರಾ ಗ್ರಾಮ ಪಂಚಾಯತ ವ್ಯಾಪ್ತಿಯಲ್ಲಿ ಸುವರ್ಣ ಗ್ರಾಮ ಯೋಜನೆ ಅಡಿಯಲ್ಲಿ ನಿವೇಶನ ಮತ್ತು ಹಕ್ಕು ಪತ್ರಕ್ಕಾಗಿ ಕಳೆದ ಎರಡು ದಿನಗಳಿಂದ ಗ್ರಾಮ ಪಂಚಾಯತ ಮುಂದೆ ಧರಣಿ ಸತ್ಯಗ್ರಹ ನಡೆಸಿದರು. 2006–07 ರಲ್ಲಿ ಅಂದಿನ ಮಂತ್ರಿ ಹನುಂಮತಪ್ಪ ಆಲ್ಕೋಡ ಅವರ ಅಧಿಕಾರಾವಧಿಯಲ್ಲಿ ಸುಮಾರು 8.5 ಎಕರೆ ರೈತರ ಭೂಮಿಯನ್ನು ಖರೀದಿಸಿ ಮಂಜುರು ಮಾಡಿದ್ದ ಸುವರ್ಣ ಗ್ರಾಮ ಯೋಜನೆಗೆ 222 ಜನರನ್ನು ಆಯ್ಕೆಮಾಡಿ ಇಲ್ಲಿಗೆ 20 ವರ್ಷ ಕಳೆದರು.**

ನಿವೇಶನದ ಹಕ್ಕುಪತ್ರ ನೀಡದೆ ಅಧಿಕಾರಿಗಳು ಹಳ್ಳ ಹಿಡಿಸಿದ್ದರು. ಗ್ರಾಮದ ಫಲಾನುಭವಿಗಳು ಸಂಘಟನೆಗಳು ಜೊತೆಗೂಡಿ ಹಲವು ಬಾರಿ ಪ್ರತಿಭಟನೆ ನಡೆಸಿದರ ಫಲವಾಗಿ ಒಂದು ಹಂತಕ್ಕೆ ಬಂದು ತಲುಪಿತು. ಮತ್ತೆ ಎರಡು ದಿನಗಳಿಂದ ಗ್ರಾಮಸ್ಥರು ಪಂಚಾಯತ ಮುಂದೆ ನಿವೇಶನಗಳ ಹಕ್ಕುಪತ್ರಕ್ಕಾಗಿ





ಉಗ್ರವಾಗಿ ಪ್ರತಿಭಟನೆ ನಡೆಸಿದರು. ಸ್ಥಳಕ್ಕೆ ಆಗಮಿಸಿದ ಸಂಬಂಧಪಟ್ಟ ಅಧಿಕಾರಿಗಳು ಗ್ರಾಮಸ್ಥರೊಂದಿಗೆ ಚರ್ಚಿಸಿ ಒಂದು ಹಂತಕ್ಕೆ ತಂದಿದ್ದಾರೆ. 8.5 ಎಕರೆ ಭೂಮಿಯಲ್ಲಿ 222 ಜನರನ್ನು ತಾಂತ್ರಿಕ ದೋಷ ಇರುವ ಕಾರಣ ಆಫ್ ಲೈನ್ ಮೂಲಕ ಕೂಡಲೇ ನಿವೇಶನದ ಹಕ್ಕುಪತ್ರ ನೀಡಲಾಗುವುದು ಎಂದು ತಿಳಿಸಿದ್ದಾರೆ.


ಒಂದು ವಾರಗಳ ಕಾಲ ಗಡುವು ನೀಡಿ ನಂತರ ಫಲಾನುಭವಿಗಳಿಗೆ ನೀಡಲಾಗುವುದು ಎಂದು ಅಧಿಕಾ–ರಿಗಳು ಪ್ರತಿಭಟನಾ ಕಾರರೊಂದಿಗೆ ಚರ್ಚಿಸಿ ಪ್ರತಿಭಟನೆ ಕೈಬಿಡಿ ಎಂದು ಮನವಿ ಮಾಡಿ ಪ್ರತಿಭಟನೆಯನ್ನು ಮೊಟಕುಗೊಳಿಸಿದರು. ಈ ವೇಳೆ ಅರಕೇರಾ ತಾಲೂಕ ತಹಶಿಲ್ದಾರ ಅಮರೇಶ ಬೀರಾದರ, ಸಹಾಯಕ ಕಾರ್ಯನಿರ್ವಾಹಕ ಅಧಿಕಾರಿ ಡಿ. ವೈ ವಾಲ್ಮೀಕಿ, ತಾಲೂಕ ಕಾರ್ಯನಿರ್ವಾಹಕ ಅಧಿಕಾರಿ ಅಣ್ಣಾರಾವ್, ಪಂಚಾಯತ ಅಭಿವೃದ್ಧಿ ಅಧಿಕಾರಿ ನಿಂಗಣ್ಣ, ಕರ್ನಾಟಕ ದಲಿತ ಸಂಘರ್ಷ ಸಮಿತಿ ರಾಜ್ಯ ಸಂಘಟನಾ ಸಂಚಾಲಕ ಹನುಮಂತ ಕಾಕರಗಲ್,

ದೇವದುರ್ಗ ತಾಲೂಕ ಸಂಚಾಲಕ ಶಿವಪ್ಪ ಪಲಕನ ಮರಡಿ, ನಾಗರಾಜ ದೇವರಮನೆ, ಕಲಾ ಮಂಡಳಿ ಹೈದರ್ ಅಲಿ, ಬೂದೆಪ್ಪ ಗಬ್ಬೂರು, ಬಸವರಾಜ ಹುಲಿಗುಡ್ಡ, ಶಿವರಾಜ ಗಣಜಿಲಿ, ಹುಲ್ಲೇಶ ಕಾಕರಗಲ್, ಶಿವಲಿಂಗ ಕರಡೋಣ, ಆಂಜನೇಯ ಬೇರಿ, ರವಿಕುಮಾರ ಜಾಡಲದಿನ್ನಿ, ಹನುಮಯ್ಯ ಮಾಸ್ತಾರ, ಶಿವರಾಜ ಭೂಮನಗುಂಡ, ಶಿವಪ್ಪ ಕಟ್ಟೆಗೌಡ, ಅಮರೇಶ ರಾಠೋಡ, ಚನ್ನಪ್ಪ ಚವ್ಹಾಣ್, ಸೂಗಪ್ಪ ಸೇರಿದಂತೆ ಊರಿನ ಹಿರಿಯರು, ಮಹಿಳೆಯರು ಉಪಸ್ಥಿತರಿದ್ದರು.

## ಅರಕೇರಾ ಬ್ಲಾಕ್ ಕಾಂಗ್ರೆಸ್ ಸಮಿತಿ ಪರಿಶಿಷ್ಠ ಪಂಗಡ ಘಟಕ ಪದಾಧಿಕಾರಿಗಳ ನೇಮಕ: ಬಸವರಾಜ ಪೂಜಾರಿ


**ನೈಜ್ಯ ದೆಸೆ ನ್ಯೂಸ್**

**ಅರಕೇರಾ: ವಿಧಾನಸಭಾ ಕ್ಷೇತ್ರ ದೇವದುರ್ಗ ಅರಕೇರಾ ಬ್ಲಾಕ್ ಕಾಂಗ್ರೆಸ್ ಸಮಿತಿ ಪರಿಶಿಷ್ಠ ಪಂಗಡ(ಎಸ್‌ಟಿ) ವಿಭಾಗ ಅರಕೇರಾ ಘಟಕ ಪದಾಧಿಕಾರಿಗಳನ್ನು ನೇಮಕ ಮಾಡಿ ಜಿ.ಮಲ್ಲಿಕಾರ್ಜುನ ಜಿಲ್ಲಾಧ್ಯಕ್ಷರು ಜಿಲ್ಲಾ ಪರಿಶಿಷ್ಠ ಪಂಗಡ ಎಸ್ ಟಿ ವಿಭಾಗ ಇವರಿಗೆ ನೇಮಕಮಾಡಿದ ಪಟ್ಟಿಯನ್ನು ಕಳಿಸಲಾಗಿದೆ ಎಂದು ಅರಕೇರಾ ತಾಲೂಕು ಬ್ಲಾಕ್ ಕಾಂಗ್ರೆಸ್ ಸಮಿತಿ ಪರಿಶಿಷ್ಠ ಪಂಗಡ ಅಧ್ಯಕ್ಷರಾದ ಬಸವರಾಜ ಪೂಜಾರಿಯವರು ಹೇಳಿದರು.**



ಅಧ್ಯಕ್ಷರು ಬಸವರಾಜಪೂಜಾರಿ ಅರಕೇರಾ ಉಪಾಧ್ಯಕ್ಷರುಗಳಾಗಿ ಓಂ ಪ್ರಕಾಶ ತಂದೆ ದೇವಿಂದ್ರಪ್ಪ ದೇವತಗಲಾದೇಪ್ಪ ತಂದೆ ನರಸಪ್ಪ ಕೊಪ್ಪೆ ಗಲಗ, ಮಲ್ಲಪ್ಪ ತಂದೆ ಈರಣ್ಣ ಅಡಕಲಗುಡ್ಡ ಪ್ರಧಾನ ಕಾರ್ಯದರ್ಶಿಗಳಾಗಿ ಕೃಷ್ಣರಾಜ ಮಕಾಶಿ ತಂದೆ ಬಸವರಾಜ ಬಿ.ಗಣೇಕಲ್,–ಆಂಜನೇಯ ಮಾಲಿಪಾಟೀಲ್ ಪಂದಾನ್ಯ,ಖಜಾಂಜಿ ಬಸವರಾಜ ತಂದೆ ರಾಮನಗೌಡ ಭೂಮನಗುಂಡ ಸಂಘಟನಾಕಾರ್ಯದರ್ಶಿಗಳಾಗಿ, ಶ್ರೀನಿವಾಸ ತಂದೆ ಸಿದ್ದಪ್ಪ ರಾಮದುರ್ಗ, ಮುದ್ದಪ್ಪ ತಂದೆ ರಂಗಪ್ಪಜಾಲಹಳ್ಳಿ ಸಾ:ಅರಕೇರಾ,ಶಿವುಕುಮಾರ ತಂದೆ ಭಗಯ್ಯ ಗುಜುಪು ಅರಕೇರಾ,ಸಿದ್ದಣ್ಣ ತಂದೆ ಹನುಮಂತ ಮುಂಡರಗಿ, ಹನುಮಂತ್ರಾಯ ತಂದೆ ಹಳ್ಳಪ್ಪ(ಹೀರಾ)ಕೊತ್ತದೊಡ್ಡಿ,ನಾಗರಾಜ ತಂದೆ ಹನುಮಪ್ಪ ಗಾಣಧಾಳ,ಶಿವರಾಜ ತಂದೆ ಲಿಂಗಪ್ಪ ಸೋಮನಮರಡಿ, ಬಸವರಾಜನಾಯಕ ಪಲಕನಮರಡಿ,ನಾಗರಾಜ ತಂದೆಮಲ್ಲಪ್ಪ ನಾಗಡದಿನ್ನಿ, ಅಮರೇಶ ತಂದೆ ದೇವಪ್ಪ ನಾಗೋಲಿ ಪದಾಧಿಕಾ–ರಿಗಳನ್ನು ನೇಮಕ ಮಾಡಲಾಗಿದೆ ಎಂದರು.

# "50ಕ್ಕೂ ಹೆಚ್ಚಿನ ಜಮೀನುಗಳಲ್ಲಿ ವಿದ್ಯುತ್ ತಂತಿ, ಮೇಕೆ ಕಳುವು"



**ನೈಜ್ಯ ದೆಸೆ ನ್ಯೂಸ್**

**ಕವಿತಾಳ: ಪಟ್ಟಣದ ವ್ಯಾಪ್ತಿಯಲ್ಲಿನ ಜಮೀನುಗಳಲ್ಲಿ ಕೊಳವೆಬಾವಿ ಮೋಟಾರ್‌ಗೆ ಸಂಪರ್ಕ ಕಲ್ಪಿಸಿದ ವಿದ್ಯುತ್ ತಂತಿಯನ್ನು ಬುಧವಾರ ರಾತ್ರಿ ಕಳವು ಮಾಡಲಾಗಿದೆ. ಇಲ್ಲಿನ ಹುಸೇನಪುರ ಸುತ್ತಮುತ್ತಲಿನ ಪ್ರದೇಶದಲ್ಲಿನ ಅಂದಾಜು 50ಕ್ಕೂ ಹೆಚ್ಚಿನ ಕೊಳವೆಬಾವಿ ಸಂಪರ್ಕ ಕಲ್ಪಿಸಿದ ವಿದ್ಯುತ್ ತಂತಿಯನ್ನು ದುಷ್ಕರ್ಮಿಗಳು ರಾತ್ರಿ ಕಟ್ ಮಾಡಿ ಕದ್ದೊಯ್ದಿದ್ದಾರೆ. ಬೆಳಿಗ್ಗೆ ಜಮೀನಿಗೆ ಹೋಗಿ ನೋಡಿದ ರೈತರು ವಿದ್ಯುತ್ ತಂತಿ ಕಳವು ಮಾಡಿದ್ದನ್ನು ಗಮನಿಸಿದ್ದಾರೆ.**

'ವಿದ್ಯುತ್ ಕಂಬದಿಂದ ಕೊಳವೆಬಾವಿ ಮೋಟಾರ್‌ಗೆ ಸಂಪರ್ಕ ಕಲ್ಪಿಸಿದ ಅಂದಾಜು 20 ಅಡಿ ಉದ್ದದ ಕೇಬಲ್ ಅನ್ನು ಕಟ್ ಮಾಡಿ ತೆಗೆದುಕೊಂಡು ಹೋಗಿದ್ದಾರೆ, ಹತ್ತಿ ಬಿತ್ತನೆಗೆ ತಯಾರಿ ಮಾಡಿಕೊಳ್ಳಲಾಗಿದ್ದು ಈ ಸಂದರ್ಭದಲ್ಲಿ ಈ ರೀತಿ ವಿದ್ಯುತ್ ಸಂಪರ್ಕ ಕಟ್ ಮಾಡಿದಲ್ಲಿ ಮತ್ತೆ ಜೋಡಿಸಿಕೊಳ್ಳಲು ಸಾವಿರ ರೂಪಾಯಿ ಖರ್ಚಾಗುತ್ತದೆ' ಎಂದು ರೈತರಾದ ಯಮನಪ್ಪ, ಹನುಮಂತ ಮತ್ತು ಯಲ್ಲಪ್ಪ ಹೇಳಿದರು. ತಾವು ಜಮೀನಿನಲ್ಲಿ ವಾಸ ಮಾಡುತ್ತಿದ್ದು ಮನೆ ಮುಂದಿನ ಎರಡು ಮೇಕೆಗಳನ್ನು ಬುಧವಾರ ರಾತ್ರಿ ಕಳವು ಮಾಡಿದ್ದಾರೆ ಈ ಸಂದರ್ಭದಲ್ಲಿಯೇ ವಿದ್ಯುತ್ ತಂತಿಯನ್ನು ಕಳವು ಮಾಡಿರಬಹುದು ಅಂದಾಜು 50ಕ್ಕೂ ಹೆಚ್ಚಿನ ರೈತರ ಜಮೀನುಗಳಲ್ಲಿ ತಂತಿ ಕಟ್ ಮಾಡಿದ್ದಾರೆ ಎಂದು ರೈತ ಮಾಳಪ್ಪ ತಿಳಿಸಿದರು.

ಕೇಬಲ್‌ನಲ್ಲಿ ಬೆಲೆ ಬಾಳುವ ತಾಮ್ರದ ತಂತಿ ಇರುತ್ತದೆ ಹೀಗಾಗಿ ಅದನ್ನು ಕದ್ದು ಗುಜರಿಗೆ ಮಾರಾಟ ಮಾಡಿರಬಹುದು ಎಂದು ರೈತರು ಸಂಶಯ ವ್ಯಕ್ತಪಡಿಸಿದರು. ಮಾಳಪ್ಪ ಅವರ ಜಮೀನಿಗೆ ಭೇಟಿ ನೀಡಿದ ಇಲ್ಲಿನ ಪೊಲೀಸರು ಮೇಕೆ ಕಳವಾದ ಬಗ್ಗೆ ಮಾಹಿತಿ ಪಡೆದಿದ್ದಾರೆ ಎನ್ನಲಾಗಿದೆ. ಆದ–'ಷ್ಟು ಬೇಗ ಇಂತಹ ಕಳ್ಳರನ್ನು ಪತ್ತೆ ಮಾಡಬೇಕು ಎಂದು ರೈತರು ಒತ್ತಾಯಿಸಿದ್ದಾರೆ.

## ಚಾಂಪಿಯನ್ ಹಾರ್ಡ್ ಟೆನ್ನಿಸ್ ಬಾಲ್ ಓಪನ್ ಕ್ರಿಕೆಟ್ ಟೂರ್ನಿಯ ಸೆಮಿಫೈನಲ್ ಭಾನುವಾರ

**ನೈಜ್ಯ ದೆಸೆ ನ್ಯೂಸ್**

**ಮುದ್ದೇಬಿಹಾಳ: ಪಟ್ಟಣದ ವಿಬಿಸಿ ಪ್ರೌಢ ಶಾಲಾ ಮೈದಾನದಲ್ಲಿ ಕಳೆದ ಹಲವು ತಿಂಗಳುಗಳಿಂದ ನಡೆಯುತ್ತಿರುವ ಚಾಂಪಿಯನ್ ಹಾರ್ಡ್ ಟೆನ್ನಿಸ್ ಬಾಲ್ ಓಪನ್ ಕ್ರಿಕೆಟ್ ಟೂರ್ನಿಯ ಸೆಮಿಫೈನಲ್ ಪಂದ್ಯಾವಳಿಗಳು ಇದೇ ತಿಂಗಳ 24ರಂದು ರವಿವಾರ ಬೆಳಗ್ಗೆ 10 ಗಂಟೆಗೆ ನಡೆಯಲಿವೆ ಎಂದು ಮುಖಂಡ ಕಾಮರಾಜ ಬಿರಾದಾರ ತಿಳಿಸಿದ್ದಾರೆ.**

ಪಟ್ಟಣದ ಪ್ರವಾಸಿ ಮಂದಿರದಲ್ಲಿ ಶುಕ್ರವಾರ ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಸೆಮಿಫೈನಲ್ ಪಂದ್ಯದಲ್ಲಿ ಬೂದಿಹಾಳ ಹಾಗೂ ಮುದ್ದೇಬಿಹಾಳ




ತಂಡಗಳು ಮುಖಾಮುಖಿಯಾಗಲಿದ್ದು, ಈ ಪಂದ್ಯದಲ್ಲಿ ಜಯಗಳಿಸುವ ತಂಡ ಫೈನಲ್‌ನಲ್ಲಿ ಈಗಾಗಲೇ ಸ್ಥಾನ ಪಡೆದಿರುವ ಆಲಮಟ್ಟಿ ತಂಡವನ್ನು ಎದುರಿಸಲಿದೆ ಎಂದು ಹೇಳಿದರು. ಟೂರ್ನಿಯ ವಿಜೇತ ತಂಡಕ್ಕೆ ಅಸ್ಕಿ ಫೌಂಡೇಶನ್ ಅಧ್ಯಕ್ಷ ಸಿ.ಬಿ. ಅಸ್ಕಿ ಅವರ ವತಿಯಿಂದ 2 ಲಕ್ಷ ನಗದು ಬಹುಮಾನ ನೀಡಲಾಗುತ್ತದೆ. ದ್ವಿತೀಯ ಬಹುಮಾನವಾಗಿ ಪಲ್ಲವಿ ನಾಡಗೌಡ ಅವರ ವತಿಯಿಂದ 1 ಲಕ್ಷ ನೀಡಲಾಗುತ್ತದೆ.

ತೃತೀಯ ಹಾಗೂ ಚತುರ್ಥ ಬಹುಮಾನವಾಗಿ ತಲಾ 25 ಸಾವಿರವನ್ನು ಎಸ್. ಎಸ್. ಹುಲ್ಲೂರ ಹಾಗೂ ಮಹಿಬೂಬ ಗೊಳಸಂಗಿ ಪ್ರಾಯೋಜಿಸಿದ್ದಾರೆ ಎಂದು ಮಾಹಿತಿ ನೀಡಿದರು. ಪತ್ರಿಕಾಗೋಷ್ಠಿಯಲ್ಲಿ ಹುಸೇನ್ ಮುಲ್ಲಾ ಕಾಳಗಿ, ಯಲ್ಲಪ್ಪ ಮ್ಯಾಗೇರಿ, ರಮಜಾನ್ ನದಾಫ್, ಶಬ್ಬಿರ್ ಮೋಮಿನ್, ಶಬ್ಬಿರ್ ಸಂಕನಾಳ, ಸೋಯಲ್ ಪಟೇಲ್ ಸೇರಿದಂತೆ ಹಲವರು ಉಪಸ್ಥಿತರಿದ್ದರು.

# ಮೋಗಾ, ಜಾಮಗಾ ಗ್ರಾಮಗಳಲ್ಲಿ ಸೌರ ತರಬೇತಿ ಕೇಂದ್ರ: ಯುವಕರಿಗೆ ಉದ್ಯೋಗಾವಕಾಶ ನೀಡಿದ ಬ್ಲುಪೈನ್ ಎನರ್ಜಿ

**ನೈಜ್ಯ ದೆಸೆ ನ್ಯೂಸ್**

**ಆಲಂದ: ತಾಲೂಕಿನ ವಿವಿಧ ಗ್ರಾಮಗಳಲ್ಲಿ ಬ್ಲುಪೈನ್ ಎನರ್ಜಿ ಸಂಸ್ಥೆಯು ವ್ಯಾಪಕ ಕಾರ್ಪೊರೇಟ್ ಸಾಮಾಜಿಕ ಹೊಣೆಗಾರಿಕೆ (CSR) ಚಟುವಟಿಕೆಗಳನ್ನು ಆಯೋಜಿಸಿತು. ಈ ಯೋಜನೆಗಳ ಉದ್ದೇಶವು ಗ್ರಾಮೀಣ ಸಮುದಾಯಗಳಲ್ಲಿ ಸ್ವಚ್ಛ ಕುಡಿಯುವ ನೀರು, ಶಿಕ್ಷಣ, ಉದ್ಯೋಗ ಕೌಶಲ್ಯಾಭಿವೃದ್ಧಿ ಹಾಗೂ ಮೂಲಭೂತ ಸೌಕರ್ಯಗಳನ್ನು ಬಲಪಡಿಸುವುದು ನಮ್ಮ ಸಂಸ್ಥೆಯ ಹಾಗೂ (PRSD) ಫೌಂಡೇಶನ್ ಗುರಿಯಾಗಿದೆ ಎಂದು ಸಂಸ್ಥೆಯ ನಿರ್ದೇಶಕರಾದ ಶ್ರೀ ಶಿವಧರ್ ದುಬೆ ಅವರು ತಿಳಿಸಿದರು.**

ನಂತರದಲ್ಲಿ ಸಂಸ್ಥೆಯ ಮುಖ್ಯ ಸಸ್ಟೇನಬಿಲಿಟಿ ಅಧಿಕಾರಿ ಸುಮಿತ್ ಬರಾಟ್ ಮಾತನಾಡಿ ಬ್ಲುಪೈನ್ ಎನರ್ಜಿ ಸಂಸ್ಥೆಯು ಶುದ್ಧ ಕುಡಿಯುವ ನೀರು ಶಿಕ್ಷಣ ಮತ್ತು ಕೌಶಲ್ಯಾಭಿವೃದ್ಧಿ ತರಬೇತಿ ನೀಡಲು ಗ್ರಾಮೀಣ ಸಮುದಾಯ ಸಬಲೀಕರಣಕ್ಕೆ ಹಾಗೂ ಗ್ರಾಮೀಣ




ಪ್ರದೇಶದ ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿ ಜೊತೆಗೆ ತರಬೇತಿ ಕೇಂದ್ರಗಳಲ್ಲಿ ಸೌರ ಪ್ಯಾನಲ್ ಸ್ಥಾಪನೆಗೆ ಸಂಬಂಧಿಸಿದ ಉಚಿತ ಆರು ತಿಂಗಳ ತರಬೇತಿ ನೀಡಲಾಗುತ್ತದೆ. ಈ ತರಬೇತಿಯಿಂದ ಕೌಶಲ್ಯಾಭಿವೃದ್ಧಿ ಕೇಂದ್ರಗಳಿಂದ 60 ವಿದ್ಯಾರ್ಥಿಗಳಿಗೆ ಪ್ರಯೋಜನವಾಗಲಿದೆ.

ಅದರಲ್ಲಿ 50% ವಿದ್ಯಾರ್ಥಿನಿಯರು ಭಾಗವಹಿಸುವ ಮೂಲಕ ಲಿಂಗಸಮಾನತೆಯನ್ನು ಉತ್ತೇಜಿಸಲಾಗುತ್ತದೆ. ಇದರಿಂದ ಸ್ಥಳೀಯ ಯುವಕರಿಗೆ ತಾಂತ್ರಿಕ ಕೌಶಲ್ಯ ಮತ್ತು ಉದ್ಯೋಗಾವಕಾಶ ವೃದ್ಧಿಯಾಗಿದೆ. ಈ ನಮ್ಮ ಸಂಸ್ಥೆ ಮುಖ್ಯ ಉದ್ದೇಶ ಆಗಿರುತ್ತದೆ ಈಗಾಗಿ




ಮೋಗಾ ಹಾಗೂ ಜಾಮಗಾ ಗ್ರಾಮದಲ್ಲಿ ತರಬೇತಿ ಕೇಂದ್ರಗಳನ್ನು ತೆರೆಯಲಾಗಿದೆ ಎಂದರು. ಹಿರಿಯ ವ್ಯವಸ್ಥಾಪಕಿ ಸುಶ್ರೀ ಸುಚಿತ್ರಾ ಬಿಸೇನ್ ಮಾತನಾಡಿ ಈ ಯೋಜನೆಗಳು ಸ್ಥಳೀಯ ಸಮುದಾಯಕ್ಕೆ ದೀರ್ಘಕಾಲಿಕ ಪ್ರಯೋಜನ ಒದಗಿಸುವ ಉದ್ದೇಶದಿಂದ ರೂಪಿಸಲಾಗಿದೆ.

ಕೌಶಲ್ಯ ಅಭಿವೃದ್ಧಿ ಕಾರ್ಯಕ್ರಮಗಳು ಮಕ್ಕಳ ಮತ್ತು ಯುವಕರ ಭವಿಷ್ಯವನ್ನು ಬಲಪಡಿಸುತ್ತೇವೆ ಸ್ಥಳೀಯ ಸಮುದಾಯ ಗ್ರಾಮಸ್ಥರು ಸಹಕಾರ ಅಭಿವೃದ್ಧಿ ಕಾರ್ಯಕ್ರಮಕ್ಕೆ ಸಮುದಾಯ ಭಾಗವಹಿಸಿಕ ಅಗತ್ಯವೆಂದು ಮತ್ತು ಸಂಸ್ಥೆಯ ಸದಸ್ಯರು ಬ್ಲುಪೈನ್ ಎನರ್ಜಿ ಹಾಗೂ ಕಖಖಆ ಫೌಂಡೇಶನ್ ವತಿಯಿಂದ ಆಯೋಜಿಸಿದ್ದ ವಿವಿಧ ಕಾರ್ಯಕ್ರಮಗಳು ಮೂಲ ಸೌಕರ್ಯ ಕಲ್ಪಿಸಲು ಮಹತ್ವದ ಪಾತ್ರ ವಹಿಸಿದೆ ಎಂದು ತಿಳಿಸಿದರು.

ಈ ಕಾರ್ಯಕ್ರಮದಲ್ಲಿ ಬ್ಲುಪೈನ್ ಎನರ್ಜಿ ದೆಹಲಿ ಮುಖ್ಯ ಸಸ್ಟೇನಬಿಲಿಟಿ ಅಧಿಕಾರಿ ಶ್ರೀ ಸುಮಿತ್ ಬರಾಟ್, ಹಿರಿಯ ವ್ಯವಸ್ಥಾಪಕಿ ಸಾಮಾಜಿಕ ಮತ್ತು ಸಸ್ಟೇನಬಿಲಿಟಿ ಸುಶ್ರೀ ಸುಚಿತ್ರಾ ಬಿಸೇನ್, ಸುಭಾಂಗಿ ಗರ್ಗ್ ವ್ಯವಸ್ಥಾಪಕಿ ಸಂವಹನ ವಿಭಾಗ ಸುಶ್ರೀ ಅಂಜಲಿ ಬಾವಾ,ಹಾಗೂ ಫೀಲ್ಡ್ ಕೋಆರ್ಡಿನೇಟರ್‌ಗಳಾದ ಶ್ರೀ ಪವನ್ ಮತ್ತು ಶ್ರೀ ಆಶುತೋಷ್ ಸಿಂಗ್, ಸ್ಥಳೀಯ ಯೋಜನಾ ತಂಡದ ಸದಸ್ಯರಾದ ಶ್ರೀ ,ಸೋಲಾರ್ ಸೈಟ್ ಮ್ಯಾನೇಜರ್ಸೇರಿದಂತೆ ಇತರ ಸಿಬ್ಬಂದಿ, ಹಾಗೂ ಗ್ರಾಮ ಪಂಚಾಯಿತಿ ಅಧ್ಯಕ್ಷರು ಉಪಾಧ್ಯಕ್ಷರು ಸದಸ್ಯರು ಮತ್ತು ಸಿಬ್ಬಂದಿಗಳು ಮತ್ತು ಸಾರ್ವಜನಿಕರು ಪಾಲ್ಗೊಂಡಿದ್ದರು.

## ಶಿಕ್ಷಣ ಮಾರ್ಗದರ್ಶಿ ವಿಶೇಷ

### ಶೈತ್ರೀಕರಣ ಮತ್ತು ಹವಾನಿಯಂತ್ರಣ ತಂತ್ರಜ್ಞ

Refrigeration and Air Conditioning Technician (RAC) ಎಂಬುದು ITI ಯಲ್ಲಿ ಕಲಿಸುವ ತಾಂತ್ರಿಕ ಕೋರ್ಸ್ ಆಗಿದ್ದು, ಫ್ರಿಜ್, ಏರ್ ಕಂಡೀಷನರ್ (AC), ಕೋಲ್ಡ್ ಸ್ಟೋರೇಜ್ ಮತ್ತು HVAC ಸಿಸ್ಟಮ್‌ಗಳ ಇನ್‌ಸ್ಟಾಲೇಶನ್, ಸರ್ವಿಸಿಂಗ್ ಮತ್ತು ರಿಪೇರಿ ಮಾಡುವ ಕೌಶಲ್ಯಗಳನ್ನು ಕಲಿಸುತ್ತದೆ. ಕೋರ್ಸ್ ಅವಧಿ 2 ವರ್ಷ 4 ಸೆಮಿಸ್ಟರ್‌ಗಳು SSLC / 10ನೇ ತರಗತಿ ಪಾಸ್ ಗಣಿತ ಮತ್ತು ವಿಜ್ಞಾನ ವಿಷಯ ಕಡ್ಡಾಯ ಕನಿಷ್ಠ ವಯಸ್ಸು 14 ವರ್ಷ ಕೋರ್ಸ್‌ನಲ್ಲಿ ಕಲಿಸುವ ವಿಷಯಗಳು ಪ್ರಾಯೋಗಿಕ ತರಬೇತಿ ಫ್ರಿಜ್ ಮತ್ತು AC ಕಾರ್ಯವಿಧಾನ ವಿಂಡೋ ಎಸಿ, ಸ್ಪ್ಲಿಟ್ ಎಸಿ ಸರ್ವೀಸಿಂಗ್ ಗ್ಯಾಸ್ ಚಾರ್ಜಿಂಗ್ ಮತ್ತು ಸೋರಿಕೆ ಪರೀಕ್ಷೆ ಕಂಪ್ರೆಸರ್ ಸೇವೆ ಎಲೆಕ್ಟ್ರಿಕಲ್ ವೈರಿಂಗ್ ಬ್ರೇಜಿಂಗ್ ಮತ್ತು ವೆಲ್ಡಿಂಗ್ ಶೀತಲ ಶೇಖರಣಾ ವ್ಯವಸ್ಥೆಗಳು ಊಗಿಂಅ ನಿರ್ವಹಣೆ ದೋಷನಿವಾರಣೆ ತಂತ್ರಗಳು ವಿಷಯಗಳು ಶೈತ್ರೀಕರಣ ಚಕ್ರ ಥರ್ಮೋಡೈನಾಮಿಕ್ಸ್ ಮೂಲಗಳು ವಿದ್ಯುತ್ ಮತ್ತು ಎಲೆಕ್ಟ್ರಾನಿಕ್ಸ್ ಸುರಕ್ಷತಾ ಅಭ್ಯಾಸಗಳು ರೆಫ್ರಿಜರೆಂಟ್‌ಗಳು ಮತ್ತು ಕಂಪ್ರೆಸರ್‌ಗಳು ಶಕ್ತಿ ದಕ್ಷತೆಯ ಪರಿಕಲ್ಪನೆಗಳು ಉದ್ಯೋಗಾವಕಾಶಗಳು ಈ ಕೋರ್ಸ್ ನಂತರ ಕೆಳಗಿನ ಕ್ಷೇತ್ರಗಳಲ್ಲಿ ಉದ್ಯೋಗ ಸಿಗಬಹುದು: AC ಸೇವಾ ಕೇಂದ್ರಗಳು ರೆಫ್ರಿಜರೇಟರ್ ತಯಾರಿಕಾ ಕಂಪನಿಗಳು ಊಗಿಂಅ ಕೈಗಾರಿಕೆಗಳು ಶೀತಲ ಶೇಖರಣಾ ಘಟಕಗಳು ಶಾಪಿಂಗ್ ಮಾಲ್‌ಗಳು ಮತ್ತು ಆಸ್ಪತ್ರೆಗಳು ರೈಲ್ವೆ ಮತ್ತು ಮೆಟ್ರೋ ನಿರ್ವಹಣೆ ಹೋಟೆಲ್‌ಗಳು ಮತ್ತು ವಾಣಿಜ್ಯ ಕಟ್ಟಡಗಳು ಗಲ್ಫ್ ರಾಷ್ಟ್ರಗಳು ಊಗಿಂಅ ಉದ್ಯೋಗಗಳು ಉದ್ಯೋಗ ಹುದ್ದೆಗಳು RAC ತಂತ್ರಜ್ಞ AC ಮೆಕ್ಯಾನಿಕಲ್ HVAC ತಂತ್ರಜ್ಞ ಶೀತಲೀಕರಣ ತಂತ್ರಜ್ಞ ಸೇವಾ ಎಂಜಿನಿಯರ್ ನಿರ್ವಹಣೆ ತಂತ್ರಜ್ಞ ಶೀತಲ ಶೇಖರಣಾ ಆಪರೇಟರ್ ಸ್ವಂತ ಉದ್ಯೋಗ ಅವಕಾಶ ಈ ಕೋರ್ಸ್ ನಂತರ ಸ್ವಂತವಾಗಿ: AC ಸೇವಾ ಅಂಗಡಿ ರೆಫ್ರಿಜರೇಟರ್ ದುರಸ್ತಿ ಕೇಂದ್ರ HVAC ಗುತ್ತಿಗೆ ಕೆಲಸ ಗೃಹೋಪಯೋಗಿ ಉಪಕರಣಗಳ ಸೇವೆ

## ಏರ್ ಇಂಡಿಯಾ ವಿಮಾನದ ಎಂಜಿನ್‌ನಲ್ಲಿ ಬೆಂಕಿ :ತುರ್ತು ಭೂ ಸ್ಪರ್ಶ

ನೈಜ್ಯ ದೆಸೆ ನ್ಯೂಸ್

**ನವದೆಹಲಿ: ಬೆಂಗಳೂರಿನಿಂದ ಬಂದ ಏರ್ ಇಂಡಿಯಾ ವಿಮಾನದ ಎಂಜಿನ್‌ನಲ್ಲಿ ಬೆಂಕಿ ಕಾಣಿಸಿಕೊಂಡ ಕಾರಣ ದೆಹಲಿ ವಿಮಾನ ನಿಲ್ದಾಣದಲ್ಲಿ ತುರ್ತು ಭೂಸ್ಪರ್ಶ ಮಾಡಲಾಗಿದೆ ಎಂದು ಮೂಲಗಳು ತಿಳಿಸಿವೆ. ಸಿಬ್ಬಂದಿ ಎಲ್ಲಾ ಪ್ರಮಾಣಿತ ಕಾರ್ಯಾಚರಣಾ ವಿಧಾನಗಳನ್ನು ಅನುಸರಿಸಿದರು ಮತ್ತು ವಿಮಾನವನ್ನು ದೆಹಲಿ ವಿಮಾನ ನಿಲ್ದಾಣದಲ್ಲಿ ಸುರಕ್ಷಿತವಾಗಿ ಇಳಿಸಿದರು.ಎಲ್ಲಾ ಪ್ರಯಾಣಿಕರು ಮತ್ತು ಸಿಬ್ಬಂದಿ ಸುರಕ್ಷಿತವಾಗಿದ್ದರು ಮತ್ತು ಸಾಮಾನ್ಯವಾಗಿ ಇಳಿದರು ಎಂದು ವಿಮಾನಯಾನ ಸಂಸ್ಥೆ ಹೇಳಿಕೆಯಲ್ಲಿ ತಿಳಿಸಿದೆ.**




ಎ320 ವಿಮಾನವು ಬೆಂಗಳೂರಿನಿಂದ ದೆಹಲಿಗೆ 2802 ವಿಮಾನವನ್ನು ಚಲಾಯಿಸುತ್ತಿತ್ತು.ವಿಮಾನವು ದೆಹಲಿಗೆ ಕೊನೆಯ ಬಾರಿಗೆ ಸಮೀಪಿಸುವಾಗ, ಕಾಕ್‌ಪಿಟ್ ಸಿಬ್ಬಂದಿಗೆ ಒಂದು ಎಂಜಿನ್‌ನಿಂದ ಬೆಂಕಿಯ ಸೂಚನೆ ಸಿಕ್ಕಿತು. ನಂತರ ಈ ಸೂಚನೆ ನಿಜವೆಂದು ದೃಢಪಡಿಸಲಾಯಿತು ಎಂದು ಹೇಳಿಕೆ ತಿಳಿಸಿದೆ.ಎಂಜಿನ್‌ನಲ್ಲಿ ಬೆಂಕಿ ಇದೆಯೇ ಎಂದು ಇನ್ನೂ ದೃಢಪಡಿಸಲಾಗಿಲ್ಲ ಎಂದು ಮೂಲಗಳು ತಿಳಿಸಿವೆ. ವಿಮಾನದಲ್ಲಿ 160 ಪ್ರಯಾಣಿಕರು ಮತ್ತು ಸಿಬ್ಬಂದಿ ಇದ್ದರು ಎಂದು ಮೂಲಗಳು ತಿಳಿಸಿವೆ.ಫ್ಲೈಟ್ ಟ್ರ್ಯಾಕಿಂಗ್ ವೆಬ್‌ಸೈಟ್ 24. ನಲ್ಲಿ ಲಭ್ಯವಿರುವ ಮಾಹಿತಿಯು ವಿಮಾನವು ರಾತ್ರಿ 9.30 ರ ಸುಮಾರಿಗೆ ಇಳಿಯಿತು ಎಂದು ತೋರಿಸಿದೆ.ಘಟನೆಯ ಕಾರಣದ ಬಗ್ಗೆ ಸಂಬಂಧಿತ ನಿಯಂತ್ರಕ ಅಧಿಕಾರಿಗಳ ಸಮನ್ವಯದೊಂದಿಗೆ ಸಂಪೂರ್ಣ ತನಿಖೆಯನ್ನು ತಕ್ಷಣವೇ ಪ್ರಾರಂಭಿಸುವುದಾಗಿ ಏರ್ ಇಂಡಿಯಾ ತಿಳಿಸಿದೆ. ಹೆಚ್ಚಿನ ಪರಿಶೀಲಿಸಿದ ಮಾಹಿತಿ ಲಭ್ಯವಾದ ತಕ್ಷಣ ಹಂಚಿಕೊಳ್ಳಲು ನಾವು ಬದ್ಧರಾಗಿದ್ದೇವೆ ಎಂದು ಅದು ಹೇಳಿದೆ.ಏತನ್ಮಧ್ಯೆ, 181 ಪ್ರಯಾಣಿಕರಿದ್ದ ಏರ್ ಇಂಡಿಯಾ ವಿಮಾನವು ನಿನ್ನೆ ಬೆಳಿಗ್ಗೆ ಬೆಂಗಳೂರು ವಿಮಾನ ನಿಲ್ದಾಣದಲ್ಲಿ ಇಳಿಯುವಾಗ ಬಾಲಕ್ಕೆ ಡಿಕ್ಕಿ ಹೊಡೆದ ನಂತರ ವಿಮಾನವನ್ನು ವಿವರವಾದ ಪರಿಶೀಲನೆಗಾಗಿ ನೆಲಕ್ಕೆ ಇಳಿಸಲಾಯಿತು.

## ಪುರಾತನ ಕಾಲದ ಹಸ್ತಪ್ರತಿ, ಶಾಸನಗಳ ಸಂಗ್ರಹ ಇದ್ದಲ್ಲಿ ಮಾಹಿತಿ ನೀಡಿ: ಪೂವಿತಾ ಎಸ್.

ನೈಜ್ಯ ದೆಸೆ ನ್ಯೂಸ್

**ರಾಯಚೂರು: ಜಿಲ್ಲೆಯಾದ್ಯಂತ ಲಭ್ಯವಿರುವ ಶತಮಾನಗಳಷ್ಟು ಹಳೆಯ ಕೈಬರಹದ ಪತ್ರಗಳು, ಹಸ್ತಪ್ರತಿಗಳು, ಶಾಸನಗಳು ಹಾಗೂ ದಾಖಲೆಗಳ ಸಂಗ್ರಹವಿದ್ದಲ್ಲಿ ಮಾಹಿತಿ ನೀಡಬೇಕೆಂದು ಜಿಲ್ಲಾಧಿಕಾರಿಗಳಾದ ಪೂವಿತಾ ಎಸ್.ಅವರು ಸಾರ್ವಜನಿಕರಲ್ಲಿ ಮನವಿ ಮಾಡಿದರು.**

ಮೇ.21ರ ಗುರುವಾರ ದಂದು ನಗರದ ನೂತನ ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಜ್ಞಾನ ಭಾರತ ಮಿಷನ್ ಯೋಜನೆಯಡಿ ರಾಷ್ಟ್ರೀಯ ಹಸ್ತ ಪ್ರತಿ ಸಮೀಕ್ಷಾ ಕಾರ್ಯಕ್ಕೆ ಪೋಸ್ಟರ್ ಬಿಡುಗಡೆ ಮಾಡುವ ಮೂಲಕ ಚಾಲನೆ ನೀಡಿ ಅವರು ಮಾತನಾಡಿದರು. ಪ್ರಾಚೀನ ಕಾಲದ ಶಾಸನಗಳು, ಹಸ್ತ ಪ್ರತಿಗಳು, ಕೈಬರಹಗಳನ್ನು ತಂತ್ರಜ್ಞಾನ ಮೂಲಕ ಶಾಶ್ವತವಾಗಿ ಉಳಿಸಲು ಅತ್ಯಂತ ಪುರಾತನ, ಹಳೆಯ ದಾಖಲೆಗಳ ಸಮೀಕ್ಷೆ, ಸಂರಕ್ಷಣೆ, ರಕ್ಷಣೆ ಡಿಜಟಲೀಕರಣಗೊಳಿಸಲು ಸರ್ಕಾರವು ಜ್ಞಾನ ಭಾರತಂ ಮಿಷನ್ ಯೋಜನೆ ಜಾರಿಗೆ ತಂದಿದೆ ಎಂದರು.



ರಾಷ್ಟ್ರ, ರಾಜ್ಯ, ಕರ್ನಾಟಕದ ಸೀಮಂತ ಸಂಸ್ಕೃತ ಪರಂಪರೆಯನ್ನು ಒಂದೇ ರಾಷ್ಟ್ರೀಯ ವೇದಿಕೆ ಮೂಲಕ ಸಾರ್ವಜನಿಕ ಪ್ರವೇಶವನ್ನು ಒದಗಿಸಿ ಭವಿಷ್ಯದ ಪೀಳಿಗೆಗೆ ಅವುಗಳ ಜ್ಞಾನ ಸಂಪತ್ತಿನ ಸಂರಕ್ಷಣೆ ಮತ್ತು ಬಳಕೆಗೆ ಹಸ್ತ ಪ್ರತಿಗಳ ಸಂರಕ್ಷಣೆ ಹಾಗೂ ಡಿಜಟಲೀಕರಣಗೊಳಿಸಲಾಗುತ್ತಿದೆ ಎಂದರು. ಜಿಲ್ಲೆಯಾದ್ಯಂತ ಗ್ರಂಥಾಲಯಗಳು, ದೇವಾಲಯಗಳು, ಮಠಗಳು, ಶೈಕ್ಷಣಿಕ ಸಂಸ್ಥೆಗಳು, ಧಾರ್ಮಿಕ ಸಂಸ್ಥೆಗಳು, ಪ್ರಾಚೀನ ಸಂಸ್ಥಾನಗಳು, ಪ್ರಾಚೀನ ಮನೆತನಗಳಲ್ಲಿ ಪುರಾತನ ಕಾಲದ ಅಪರೂಪದ ಹಸ್ತ ಪ್ರತಿ, ದಾಖಲೆಗಳ ಸಂಗ್ರಹ ಇರಬಹುದು. ಅವುಗಳ ಬಗ್ಗೆ ಇತಿಹಾಸಕಾರರು, ಸಂಶೋಧಕರು, ಸಾರ್ವಜನಿಕರು ಮಾಹಿತಿ ನೀಡಿ ಸಮೀಕ್ಷಾ ಕಾರ್ಯಕ್ಕೆ ಸಹಕರಿಸಬೇಕೆಂದು ಜಿಲ್ಲಾಧಿಕಾರಿಗಳು ಕೋರಿದರು.

ಸಾರ್ವಜನಿಕರು ಹಸ್ತಪ್ರತಿಗಳ ಬಗ್ಗೆ ಮಾಹಿತಿ ನೀಡುವುದರಿಂದ ಸರ್ಕಾರ ಅವುಗಳನ್ನು ವಶಪಡಿಸಿಕೊಳ್ಳಲಿದೆ. ಸಮಸ್ಯೆ ಆಗುತ್ತದೆ ಎಂಬ ಆತಂಕ, ಗೊಂದಲ ಬೇಡ. ಮಾಲಿಕರ ಅನುಮತಿಯೊಂದಿಗೆ ಅವುಗಳ ಡಿಜಿಟಲೀಕರಣಗೊಳಿಸಿ ಮೂಲ ಪ್ರತಿ ಅವರ ಬಳಿಯೇ ಉಳಿಸಲಾಗುವುದೆಂದು ಜಿಲ್ಲಾಧಿಕಾರಿಗಳು ತಿಳಿಸಿದರು.

ಮಾಹಿತಿ ಎಲ್ಲಿ ನೀಡಿ: ಸಾರ್ವಜನಿಕರು ಹಸ್ತ ಪ್ರತಿಗಳ ಬಗ್ಗೆ ಮಾಹಿತಿ ನೀಡಲು ಸಹಾಯಕ ನಿರ್ದೇಶಕರ ಕಚೇರಿ, ಪ್ರವಾಸೋದ್ಯಮ ಇಲಾಖೆ, ಗಣೇಶ ಗುಡಿ ಹತ್ತಿರ, ನಿಜಲಿಂಗಪ್ಪ ಕಾಲೋನಿ, ರಾಯಚೂರು-584101 ದೂರವಾಣಿ ಸಂಖ್ಯೆ: 08532-200677 ಅಥವಾ ಇಮೇಲ್: adtourismrcr@gmail.com ಸಂಪರ್ಕ ಮಾಡಬಹುದಾಗಿದೆ ಎಂದು ಪ್ರವಾಸೋದ್ಯಮ ಇಲಾಖೆಯ ಸಹಾಯಕ ನಿರ್ದೇಶಕರಾದ ನಜೀರ್ ಅಹ್ಮದ್ ಅವರು ಹೇಳಿದರು. ಇದೇ ಸಂದರ್ಭದಲ್ಲಿ ಅಪರ ಜಿಲ್ಲಾಧಿಕಾರಿ ಶಿವಾನಂದ, ಜಿಲ್ಲಾ ಪುರಾತತ್ವ ಸಂರಕ್ಷಣಾಧಿಕಾರಿ ಶಿವಬಸವ, ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವ್ಹಾರಗಳ ಇಲಾಖೆಯ ಜಿಲ್ಲಾ ವ್ಯವಸ್ಥಾಪಕ ಜಿ.ಹರೀಶ, ಪ್ರವಾಸೋದ್ಯಮ ಇಲಾಖೆಯ ಪ್ರಥಮ ದರ್ಜೆ ಸಹಾಯಕಿ ಕವಿತಾ ಅವರು ಸೇರಿದಂತೆ ಇತರರು ಉಪಸ್ಥಿತರಿದ್ದರು.

## 3 ಸ್ಟಾರ್ ರ್ರೇಟಿಂಗ್: ಸಾರ್ವಜನಿರು ಪಾಲಿಕೆಯೊಂದಿಗೆ ಕೈಜೋಡಿಸಲು ಮನವಿ

ನೈಜ್ಯ ದೆಸೆ ನ್ಯೂಸ್

**ರಾಯಚೂರು: ರಾಯಚೂರು ಮಹಾನಗರ ಪಾಲಿಕೆ ಸ್ವಚ್ಛ ಸರ್ವೇಕ್ಷಣ್-2026ರ ಮೌಲ್ಯ ಮಾಪನದ ಅಡಿಯಲ್ಲಿ ಗಾರ್ಬೇಜ್ಫ್ರೀಸಿಟಿ (ಜಿ. ಎಫ್.ಸಿ) 3 ಸ್ಟಾರ್ ರ್ರೇಟಿಂಗ್ಗೆ ರಾಯಚೂರು ಮಹಾನಗರ ಪಾಲಿಕೆಯು ಅರ್ಜಿ ಸಲ್ಲಿಸುತ್ತಿದ್ದು, ಸಾರ್ವಜನಿರು ಪಾಲಿಕೆಯೊಂದಿಗೆ ಕೈಜೋಡಿಸಬೇಕೆಂದು ಕೋರಲಾಗಿದೆ.**

ಎಲ್ಲಾ ನಾಗರಿಕರು ಪರಿಣಾಮಕಾರಿ ಘನತ್ಯಾಜ್ಯ ನಿರ್ವಹಣೆಯನ್ನು ಖಚಿತಪಡಿಸಿಕೊಳ್ಳಲು ಮತ್ತು ಸ್ವಚ್ಛತೆಯ ಮಾನದಂಡಗಳನ್ನು ಕಾಪಾಡಿಕೊಳ್ಳಲು ನಗರವು ಸಾಕಷ್ಟು ತ್ಯಾಜ್ಯ ಸಂಸ್ಕರಣಾ ಸೌಲಭ್ಯಗಳನ್ನು ಸ್ಥಾಪಿಸಿದೆ. ಸರಿಯಾದ ತ್ಯಾಜ್ಯ ವಿಂಗಡಣೆ ಪದ್ಧತಿಗಳನ್ನು ಅನುಸರಿಸುವ ಮೂಲಕ ಮತ್ತು ನಗರವನ್ನು ಸ್ವಚ್ಛ ಮತ್ತು ನೈರ್ಮಲ್ಯವಾಗಿಡಲು ಕೊಡುಗೆ ನೀಡುವ ಮೂಲಕ ಈ ಮೌಲ್ಯ ಮಾಪನ ಪ್ರಕ್ರಿಯೆಯಲ್ಲಿ ಎಲ್ಲಾ ಮೂಲದಲ್ಲಿಯೇ ತ್ಯಾಜ್ಯ ವಿಂಗಡಣೆ ಕಡ್ಡಾಯವಾಗಿದ್ದು, ದಯವಿಟ್ಟು ನಿಮ್ಮ ಮನೆಯಲ್ಲಿಯೇ ಒಣ ಕಸ ಮತ್ತು ಆರ್ದ್ರಕಸವನ್ನು ಪ್ರತ್ಯೇಕವಾಗಿ ಎರಡು ಡಬ್ಬಗಳಲ್ಲಿ ಸಂಗ್ರಹಿಸಿ. ನಗರಸಭೆಯ ವಾಹನ ಬಂದಾಗ ಮಾತ್ರ ಹೊರಗಿಡಬೇಕು.

ಒಣಕಸವನ್ನು ಪ್ಲಾಸ್ಟಿಕ್, ಕಾಗದ, ಗಾಜು ಎಂದೂ ಪ್ರತ್ಯೇಕಿಸಿದರೆ ಅದು ಮರು ಬಳಕೆಗೆ ಸಹಕಾರಿಯಾಗಿದೆ. ಸಾರ್ವಜನಿಕ ಸ್ಥಳಗಳಲ್ಲಿ ಕಸ ಎಸೆಯಬೇಡಿ: ರಸ್ತೆ, ನಾಲಾ, ಖಾಲಿ ಜಾಗಗಳಲ್ಲಿ ಕಸ ಎಸೆಯುವುದನ್ನು ತಪ್ಪಿಸಿ. ಸ್ವಚ್ಛತೆಗಾಗಿ ಇರಿಸಲಾಗಿರುವ ತೊಟ್ಟಿಗಳನ್ನು ಮಾತ್ರ ಬಳಸಿಬೇಕು. ಪ್ಲಾಸ್ಟಿಕ್ನಿಷೇಧವನ್ನು ಪಾಲಿಸಬೇಕು. ಶಾಪಿಂಗ್ಗೆ ಹೋದಾಗ ಬಟ್ಟೆಯ ಚೀಲಗಳನ್ನು ಬಳಸಬೇಕು. ನಿಮ್ಮ ಸುತ್ತಮುತ್ತಲಿನಲ್ಲಿ ಕಸ ತುಂಬಿಕೊಂಡಿದ್ದರೆ, ಸಾರ್ವಜನಿಕಸ್ಥಳ ಅಶುದ್ಧವಾಗಿದ್ದರೆ, ಅದರ ಫೋಟೋತೆಗೆದು ಸ್ವಚ್ಛತಾ ಆಯಫ್ ಅಥವಾ ಮೈಗವ್ ಆಯಫ್ ಮೂಲಕ ದೂರು ನೋಂದಾಯಿಸಬಹುದಾಗಿದೆ.

ಇದರಿಂದ ಸಮಸ್ಯೆ ಪರಿಹಾರವಾಗುವುದರ ಜೊತೆಗೆ ನಮ್ಮ ನಗರದ ದೂರು ನಿವಾರಣಾ ಸಾಮರ್ಥ್ಯವೂ ಹೆಚ್ಚಾಗುತ್ತದೆ. ಸ್ವಚ್ಛತಾ ಸಂಬಂದಿ ನಿಮ್ಮಅಭಿಪ್ರಾಯವನ್ನು ವೋಟ್ಫಾರ್ಮೈಸಿಟಿ ಆ?ಯಫ್ ಮೂಲಕ ದಾಖಲಿಸಿ. ನಾಗರಿಕರ ಪ್ರತಿಕ್ರಿಯೆಗೆ ಸರ್ವೇಕ್ಷಣೆಯಲ್ಲಿ ಪ್ರತ್ಯೇಕ ಅಂಕಗಳಿದ್ದು, ನಿವಾಸಿಗಳು ತಮ್ಮ ಸಂಪೂರ್ಣ ಬೆಂಬಲ ಮತ್ತು ಸಹಕಾರವನ್ನು ನೀಡುವಂತೆ ರಾಯಚೂರು ಮಹಾನಗರ ಪಾಲಿಕೆಯ ಆಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಮಾದಕ ವಸ್ತುಗಳ ಸೇವನೆ ನಿಷೇಧ ಜಾಗೃತಿ ಮತ್ತು ಭಯೋತ್ಪಾದನಾ ವಿರೋಧಿ ದಿನಾಚರಣೆ ಕಾರ್ಯಕ್ರಮಕ್ಕೆ ಚಾಲನೆ :ಪ್ರಾಧ್ಯಾಪಕ ಕೃಷ್ಣಪ್ಪ

ನೈಜ್ಯ ದೆಸೆ ನ್ಯೂಸ್

**ಸಿರುಗುಪ್ಪ: ಮಾದಕ ವಸ್ತುಗಳ ಸೇವನೆಯಿಂದ ದೂರವಿರುವುದು ಆರೋಗ್ಯಕರ ಮತ್ತು ಯಶಸ್ವಿ ಜೀವನಕ್ಕೆ ಅತ್ಯಂತ ಮುಖ್ಯ ಮಾದಕ ವಸ್ತುಗಳು ದೈಹಿಕ ಮತ್ತು ಮಾನಸಿಕ ಆರೋಗ್ಯವನ್ನು ಸಂಪೂರ್ಣವಾಗಿ ಹಾಳು ಮಾಡುತ್ತವೆ ಎಂದು ಹಿರಿಯ ಪ್ರಾಧ್ಯಾಪಕ ಕೃಷ್ಣಪ್ಪ ತಿಳಿಸಿದರು.**

ನಗರದ ಟಿ. ಎಸ್. ಎಚ್. ಎಂ. ಎಸ್ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ರಾಷ್ಟ್ರೀಯ ಸೇವಾ ಯೋಜನೆಯ ಎ ಮತ್ತು ಬಿ ಘಟಕಗಳು ಹಾಗೂ ಅಬಕಾರಿ ಇಲಾಖೆ ಸಂಯುಕ್ತಾಶ್ರಯದಲ್ಲಿ ಹಮ್ಮಿಕೊಂಡಿದ್ದ ಮಾದಕ ವಸ್ತುಗಳ ಸೇವನೆ ನಿಷೇಧ ಜಾಗೃತಿ ಮತ್ತು ಭಯೋತ್ಪಾದನಾ ವಿರೋಧಿ ದಿನಾಚರಣೆ ಕಾರ್ಯಕ್ರಮದಲ್ಲಿ ಮಾತನಾಡಿ ಅವರು ಸಮಾಜ ಘಾತುಕ ಚಟುವಟಿಕೆಯಾದ ಭಯೋತ್ಪಾದನೆಯು ಕಾರ್ಯಕ್ಕೂ



ಕೂಡ ಪರೋಕ್ಷ ಪ್ರೇರಣೆ ನೀಡುವುದರಿಂದ ವಿದ್ಯಾರ್ಥಿಗಳು ಮಾದಕ ವಸ್ತುಗಳಿಂದ ಅಂತರ ಕಾಯ್ದುಕೊಂಡು ಮಾನಸಿಕವಾಗಿ ಬೌದ್ಧಿಕವಾಗಿ ದೈಹಿಕವಾಗಿ ಸ್ವಾಸ್ಥ್ಯ ಕಾಪಾಡಿಕೊಂಡು ತಮ್ಮ ಭವಿಷ್ಯವನ್ನು ರೂಪಿಸಿಕೊಂಡು ಉತ್ತಮ ಜೀವನವನ್ನು ನಡೆಸಬೇಕೆಂದು ಹೇಳಿದರು.

ಅಬಕಾರಿ ಇಲಾಖೆಯ ಸಿಪಿಐ ಅಂಬಣ್ಣ ಮಾತನಾಡಿ ಮಾದಕ ವಸ್ತುಗಳನ್ನು ನೈಸರ್ಗಿಕ ಮಾದಕ ಪದಾರ್ಥ ನೈಸರ್ಗಿಕ ಪದಾರ್ಥ ಮತ್ತು ರಾಸಾಯನಿಕ ವಸ್ತುಗಳ ಮಿಶ್ರಿತ ಹಾಗೂ ಸಿಂಥೆಟಿಕ್ಸ್ ಡ್ರಗ್ಸ್ ಎಂದು ಮೂರು ರೂಪದಲ್ಲಿವೆ 1985 ರ ಮಾದಕ ವಸ್ತುಗಳ ನಿಷೇಧ ಕಾಯ್ದೆ ಅನ್ವಯ ಮಾದಕ ವಸ್ತುಗಳನ್ನು ಬೆಳೆಸುವುದು ಮಾರಾಟ ಮಾಡುವುದು ಸೇವಿಸುವುದು ಮತ್ತು ಸಾಗಿಸುವುದು ಕಾನೂನು ಪ್ರಕಾರ ಶಿಕ್ಷಾರ್ಹ ಅಪರಾಧವಾಗಿರುತ್ತದೆ ಎಂದರು ಅಧ್ಯಾಪಕ ರಾಮಣ್ಣ ಪೂಜಾರಿ ವಿದ್ಯಾರ್ಥಿಗಳಿಗೆ ಭಯೋತ್ಪಾದನಾ ನಿಯಂತ್ರಣದ ಪ್ರತಿಜ್ಞಾವಿಧಿ ಬೋಧಿಸಿದರು ಎನ್. ಎಸ್. ಎಸ್. ಎ ಘಟಕದ ಕಾರ್ಯ ಕ್ರಮಾಧಿಕಾರಿ ಡಾ ಕೆ ಎಂ ಚಂದ್ರಕಾಂತ ಪ್ರಾಸ್ತವಿಕವಾಗಿ ಮಾತನಾಡಿದರು ಎನ್ ಎನ್ ಎಸ್ ಬಿ ಘಟಕದ ಕಾರ್ಯಕ್ರಮಾಧಿಕಾರಿ ಬಕಾಡೆ ಪಂಪಾಪತಿ ನಿರೂಪಿಸಿದರು ಭೌತಶಾಸ್ತ್ರ ವಿಭಾಗದ ಮುಖ್ಯಸ್ಥ ಡಾ ಶಾಲಿನ. ಆಂಗ್ಲ ಭಾಷಾ ವಿಭಾಗದ ಮುಖ್ಯಸ್ಥ ಪ್ರಶಾಂತ್ ಬಾಬು ಟಿಎಸ್ ಅಧ್ಯಾಪಕರಾ ಸುರೇಶ ಡಾ ರಾಜೇಂದ್ರ ರೇಣುಕಾ ಕು. ಮಮತಾ ಮತ್ತು ವಿದ್ಯಾರ್ಥಿಗಳು ಇದ್ದರು.

ವರದಿ : ಮಸೀದಿ,ಅಬ್ದುಲ್ ಗೌಸ್, ಸಿರುಗುಪ್ಪ

# ಇಂದು ಮರುಬಳಕೆ ಮಾಡಿದರೆ, ನಾಳೆ ಪರಿಸರ ಉಳಿಯುತ್ತದೆ

## ಬಳಗಾನೂರಿನಲ್ಲಿ RRR ಸೆಂಟರ್ ಜಾಗೃತಿ ಅಭಿಯಾನ: ಸ್ವಚ್ಛ ಪಟ್ಟಣ ನಿರ್ಮಾಣಕ್ಕೆ ಸಾರ್ವಜನಿಕರ ಕೈಜೋಡಿಸುವಂತೆ ಮನವಿ

ನೈಜ್ಯ ದೆಸೆ ನ್ಯೂಸ್

**ಬಳಗಾನೂರು: ಮಸ್ಕಿ ತಾಲೂಕಿನ ಬಳಗಾನೂರು ಪಟ್ಟಣ ಪಂಚಾಯ್ತಿಯಲ್ಲಿ ಶುಕ್ರವಾರ "ಖಖಖ ಸೆಂಟರ್" ಕುರಿತು ಸಾರ್ವಜನಿಕರಿಗೆ ಸವಿವರ ಮಾಹಿತಿ ನೀಡುವ ಜಾಗೃತಿ ಕಾರ್ಯಕ್ರಮ ನಡೆಯಿತು. ಪಟ್ಟಣ ಪಂಚಾಯಿತಿಯ ಆವರಣದಲ್ಲಿ ನಡೆದ ಕಾರ್ಯಕ್ರಮದಲ್ಲಿ ಪರಿಸರ ಸಂರಕ್ಷಣೆ, ಕಸದ ಪ್ರಮಾಣ ಕಡಿಮೆ ಮಾಡುವುದು ಹಾಗೂ ಸ್ವಚ್ಛ ಮತ್ತು ಸುಂದರ ಪಟ್ಟಣ ನಿರ್ಮಾಣದ ಉದ್ದೇಶದಿಂದ ``RRR ಸೆಂಟರ್''ಗಳನ್ನು ಆರಂಭಿಸಲಾಗುತ್ತಿದೆ ಎಂದು ಅಧಿಕಾರಿಗಳು ತಿಳಿಸಿದರು.**

ಕಾರ್ಯಕ್ರಮದಲ್ಲಿ ಮಾತನಾಡಿದ ಪಟ್ಟಣ ಪಂಚಾಯಿತಿಯ ದ್ವಿತೀಯ ದರ್ಜೆ ಸಹಾಯಕ ತಿರುಪತಿ, ``RRR'' ಎಂದರೆ Reduce (PÀrªÉÄ §¼ÀPÉ), Reuse (ಮರುಬಳಕೆ) ಮತ್ತು Recycle (ಮರುಸಂಸ್ಕರಣೆ) ಎಂಬ ಮೂರು ಪ್ರಮುಖ ತತ್ವಗಳನ್ನು ಒಳಗೊಂಡ ಪರಿಸರ ಸ್ನೇಹಿ ಯೋಜನೆಯಾಗಿದೆ ಎಂದು ವಿವರಿಸಿದರು. ಇಂದಿನ ದಿನಗಳಲ್ಲಿ ಹೆಚ್ಚುತ್ತಿರುವ ಕಸದ ಸಮಸ್ಯೆಗೆ ಪರಿಹಾರ ಕಂಡುಕೊಳ್ಳುವ ಉದ್ದೇಶದಿಂದ ಸರ್ಕಾರ ಈ ಯೋಜನೆಯನ್ನು ಜಾರಿಗೆ ತಂದಿದ್ದು, ಸಾರ್ವಜನಿಕರು ಇದರ ಸದುಪಯೋಗ




ಪಡೆದುಕೊಳ್ಳಬೇಕು ಎಂದು ಕರೆ ನೀಡಿದರು.

ಮನೆಯಲ್ಲಿರುವ ಉಪಯೋಗಕ್ಕೆ ಬಾರದಿದ್ದರೂ ಇನ್ನೂ ಬಳಸಬಹುದಾದ ವಸ್ತುಗಳನ್ನು ಕಸದ ಬುಟ್ಟಿಗೆ ಹಾಕದೇ, ಅವುಗಳನ್ನು ಮರುಬಳಕೆ ಅಥವಾ ಮರುಸಂಸ್ಕರಣೆ ಮಾಡುವ ಮೂಲಕ ಪರಿಸರವನ್ನು ರಕ್ಷಿಸುವುದು ಈ ಯೋಜನೆಯ ಮುಖ್ಯ ಉದ್ದೇಶವಾಗಿದೆ ಎಂದು ಹೇಳಿದರು. ಜನರು ತಮ್ಮ ಮನೆಗಳಲ್ಲಿ ಸಂಗ್ರಹವಾಗಿರುವ ಅನಾವಶ್ಯಕ ವಸ್ತುಗಳನ್ನು ಖಖಖ ಸೆಂಟರ್‌ಗೆ ನೀಡುವುದರಿಂದ ಪರಿಸರ ಸಂರಕ್ಷಣೆ ಜೊತೆಗೆ ಸಮಾಜಮುಖಿ ಕಾರ್ಯಕ್ಕೂ ಸಹಕಾರಿಯಾಗುತ್ತದೆ ಎಂದರು.

ನಂತರ ಮಾತನಾಡಿದ ಸಮುದಾಯ ಸಂಚಾಲಕಿ ಗೀತಾ ಗಂಡ ಸುರೇಶ, ಸಾರ್ವಜನಿಕರು ಖಖಖ ಕೇಂದ್ರಕ್ಕೆ ಹಳೆಯ ಬಟ್ಟೆಗಳು, ಪುಸ್ತಕಗಳು, ಶಾಲಾ ಸಾಮಗ್ರಿಗಳು, ಆಟಿಕೆಗಳು, ಪ್ಲಾಸ್ಟಿಕ್ ವಸ್ತುಗಳು, ಪಾದರಕ್ಷೆಗಳು, ಬಳಕೆಯ ಗೃಹೋಪಯೋಗಿ ವಸ್ತುಗಳು, ಸಣ್ಣ ಎಲೆಕ್ಟ್ರಾನಿಕ್ ಉಪಕರಣಗಳು ಹಾಗೂ ಹಾಳಾಗದ ಪೀಠೋಪಕರಣಗಳನ್ನು ನೀಡಬಹುದಾಗಿದೆ ಎಂದು ತಿಳಿಸಿದರು.ಸಂಗ್ರಹಿಸಲಾದ ವಸ್ತುಗಳಲ್ಲಿ ಉಪಯೋಗಕ್ಕೆ ಯೋಗ್ಯವಿರುವ ವಸ್ತುಗಳನ್ನು ಅಗತ್ಯವಿರುವ ಕುಟುಂಬಗಳಿಗೆ ವಿತರಿಸಲಾಗುವುದು. ಕೆಲವು ವಸ್ತುಗಳನ್ನು ಮರುಬಳಕೆ ಮಾಡಲಾಗುವುದಲ್ಲದೆ, ಮರುಸಂಸ್ಕರಣೆಗೆ ಯೋಗ್ಯವಾದ ವಸ್ತುಗಳನ್ನು ರಿಸೈಕಲ್ ಘಟಕಗಳಿಗೆ ಕಳುಹಿಸಲಾಗುವುದು ಎಂದು ಹೇಳಿದರು.ಈ ಯೋಜನೆಯಿಂದ ಪರಿಸರ ಸಂರಕ್ಷಣೆ, ಕಸದ ಪ್ರಮಾಣ ಕಡಿತ, ಸ್ವಚ್ಛ ಮತ್ತು ಸುಂದರ ಪಟ್ಟಣ ನಿರ್ಮಾಣ, ಅಗತ್ಯವಿರುವವರಿಗೆ ನೆರವು ಹಾಗೂ ಮರುಬಳಕೆ ಬಗ್ಗೆ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸುವಂತಹ ಹಲವು ಪ್ರಯೋಜನಗಳಿವೆ ಎಂದು ವಿವರಿಸಿದರು.

"ಪ್ರತಿಯೊಬ್ಬ ನಾಗರಿಕರೂ ತಮ್ಮ ಮನೆಯಲ್ಲಿರುವ ಉಪಯೋಗಿಸಬಹುದಾದ ಅನಾವಶ್ಯಕ ವಸ್ತುಗಳನ್ನು ಖಖಖ ಸೆಂಟರ್‌ಗೆ ನೀಡಿ ಪರಿಸರ ಸಂರಕ್ಷಣೆಗೆ ಕೈಜೋಡಿಸಬೇಕು. ಇಂದು ಮರುಬಳಕೆ ಮಾಡಿದರೆ, ನಾಳೆ ಪರಿಸರ ಉಳಿಯುತ್ತದೆ" ಎಂದು ಮನವಿ ಮಾಡಿದರು. ಈ ಸಂದರ್ಭದಲ್ಲಿ ಕಂದಾಯ ನಿರೀಕ್ಷಕರಾದ ಭೀಮಪ್ಪ, ಮುಖ್ಯಾಧಿಕಾರಿಗಳಾದ ಗೋಪಾಲ ನಾಯಕ, ರುದ್ರಮುನಿ, ಈಶ್ವರಯ್ಯಸ್ವಾಮಿ, ಸಂತೋಷ, ಸಮುದಾಯ ಸಂಚಾಲಕಿ ದುರುಗಮ್ಮ ವಿರುಪಾಕ್ಷಿ ಸೇರಿದಂತೆ ಪೌರಕಾರ್ಮಿಕರು ಹಾಗೂ ಸಾರ್ವಜನಿಕರು ಉಪಸ್ಥಿತರಿದ್ದರು.

ವರದಿ: ಸುರೇಶ ಬಳಗಾನೂರು

OWNER, PUBLISHER, PRINTER BY IRFAN K H NO. 3/117, BALAGANUR, SINDHANOOR, RAICHUR-584138 KARNATAKA AND PRINTED AT SHIVANI PRINTERS, HULKOTI, NEW COURT, OPPOSITE PLOT NO. 28 RS NO. 312/3B, GARAG COMPLEX, GADAG-582101 KARNATAKA, EDITOR BY: IRFAN K PH NO.